# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

KANNADA POST

ಸಂಪಾದಕ : ಮಂಜು ಬನವಾಸೆ

ಕನ್ನಡ ದಿನ ಪತ್ರಿಕೆ Kannada Daily

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 184 | Pages. 2 | Date: 30-05-2025, FRIDAY | RNI NO: KARKAN/2024/89601

ಸಂಪುಟ : 01 - ಸಂಚಿಕೆ : 184 - ಪುಟಗಳು : 2 - 30 ಮೇ 2025 ಶುಕ್ರವಾರ | Ph: 8762954248 | ದರ : ₹1


# ಹೆದ್ದಾರಿ ಕಾಮಗಾರಿ ಕಳಪೆಗೆ ಕೇಂದ್ರ ಕಾರಣ

## ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ : ಭೂಕುಸಿತ ಸ್ಥಳ ಪರಿಶೀಲನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಸಕಲೇಶಪುರ: ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಕಳಪೆಯಾಗಲು ಕೇಂದ್ರ ಸರ್ಕಾರವೇ ಹೊಣೆ. ಇದರಲ್ಲಿ ನಮ್ಮ ಪಾತ್ರವಿಲ್ಲ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ತಾಲ್ಲೂಕಿನ ಮಳೆಪೀಡಿತ ಪ್ರದೇಶಕ್ಕೆ ಗುರುವಾರ ಭೇಟಿ ನೀಡಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಈ ಕಾಮಗಾರಿಯ ಸಂಪೂರ್ಣ ಜವಾಬ್ದಾರಿ ಕೇಂದ್ರ ಸರ್ಕಾರದ್ದೇ. ನಾವು ಕೇಂದ್ರದ ಗಮನಕ್ಕೆ ತರುವುದಷ್ಟೇ ಮಾಡಬಹುದು. ಇದರಲ್ಲಿ ರಾಜ್ಯ ಸರ್ಕಾರದ ಯಾವುದೇ ಪಾತ್ರವಿಲ್ಲ ಎಂದು ಹೇಳಿದರು.

ನಿರಂತರವಾಗಿ ಭೂಕುಸಿತಗಳು ಸಂಭವಿಸುತ್ತಿವೆ. ಇದರ ಮುಖ್ಯ ಕಾರಣ ಭೂಮಿಯನ್ನು 90 ಡಿಗ್ರಿಯಲ್ಲಿ ಕತ್ತರಿಸಿರುವುದು. ಈ ಕಾಮಗಾರಿಯನ್ನು ವೈಜ್ಞಾನಿಕವಾಗಿ ನಡೆಸಬೇಕೆಂದು ನಾವು ಕೇಂದ್ರಕ್ಕೆ ತಿಳಿಸಿದ್ದೇವೆ. ಆದರೆ ನಮ್ಮ ಸಲಹೆ ಕಾರ್ಯಗತಗೊಳಿಸುತ್ತಿಲ್ಲ ಎಂದರು.

ಮೂರು ತಿಂಗಳಲ್ಲಿ ಕಾಮಗಾರಿ ಮುಗಿಯುತ್ತದೆ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಆದರೆ ಸರಿಯಾಗಿ ಮುಗಿಸಲು ಕನಿಷ್ಟ ಆರು ತಿಂಗಳು ಬೇಕಾಗುತ್ತದೆ. ಈ ಕಾಮಗಾರಿಯ ಜವಾಬ್ದಾರಿ ನಮ್ಮ ಕೈಯಲ್ಲಿದ್ದರೆ, ನಾವು ಈಗಾಗಲೇ ಗುಣಮಟ್ಟದೊಂದಿಗೆ ಮುಗಿಸುತ್ತಿದ್ದೆವು ಎಂದರು.

ನಿಮಗೆ ಜವಾಬ್ದಾರಿ ಇಲ್ಲದಿದ್ದರೆ ಸ್ಥಳ ವೀಕ್ಷಣೆಗೆ ಏಕೆ ಬರುತ್ತೀರಿ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಯೋಜನೆಯು ಸಂಪೂರ್ಣವಾಗಿ ಕೇಂದ್ರ ಸರ್ಕಾರದದ್ದೇ. ಅಧಿಕಾರಿಗಳು, ಹಣ ಎಲ್ಲವೂ ಅವರದ್ದೇ. ನಾವು ರಸ್ತೆ ಮಾತ್ರ ಬಿಟ್ಟಿದ್ದೇವೆ. ಹೀಗಿರುವಾಗ ನಮ್ಮ ಜವಾಬ್ದಾರಿ ಏನು. ನಾವು ಲೋಪದೋಷಗಳನ್ನು ಗಮನಿಸಿ ಕೇಂದ್ರಕ್ಕೆ ಪತ್ರ ಬರೆದು ದೂರುತ್ತೇವೆ ಎಂದು ಸ್ಪಷ್ಟಪಡಿಸಿದರು.

## ಅಡಾಣಿ ಗುಡ್ಡ ಜನರ ಸ್ಥಳಾಂತರ

ತಾಲ್ಲೂಕಿನ ಅಡಾಣಿ ಗುಡ್ಡದಲ್ಲಿ ಭೂಕುಸಿತದ ಆತಂಕ ಎದುರಿಸುತ್ತಿರುವ ಕುಟುಂಬಗಳಿಗೆ ಶೀಘ್ರ ಪರಿಹಾರ ನೀಡಿ, ಅವರ ಮನೆಗಳನ್ನು ಸ್ಥಳಾಂತರಗೊಳಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಖುಷ್ಬು ಗೊಯಲ್ ಚೌಧರಿ ತಿಳಿಸಿದರು. ರಾಷ್ಟ್ರೀಯ ಹೆದ್ದಾರಿ 75ರ ಭೂಕುಸಿತ ಪ್ರದೇಶಗಳಿಗೆ ಗುರುವಾರ ಭೇಟಿ ನೀಡಿ ಮಾತನಾಡಿ, ಗುಡ್ಡಗಳನ್ನು 90 ಡಿಗ್ರಿ ಕೋನದಲ್ಲಿ ಕತ್ತರಿಸಿರುವುದು ಭೂಕುಸಿತಕ್ಕೆ ಕಾರಣವಾಗಿದೆ. ಅಡಾಣಿ ಗುಡ್ಡದ ಸುಮಾರು 10 ಕುಟುಂಬಗಳಿಗೆ ಈಗಾಗಲೇ ಪರಿಹಾರ ನೀಡಿ ಬೇರೆಡೆಗೆ ಸ್ಥಳಾಂತರಿಸಲಾಗಿದೆ. ಆದರೆ, ಇನ್ನೂ 10ಕ್ಕೂ ಹೆಚ್ಚು ಕುಟುಂಬಗಳು ಪರಿಹಾರ ದೊರೆಯದ ಕಾರಣ ಆತಂಕದ ನಡುವೆ ಗುಡ್ಡದ ಪ್ರದೇಶದಲ್ಲೇ ಜೀವನ ನಡೆಸುತ್ತಿವೆ ಎಂದರು.

ಜಿಲ್ಲಾಡಳಿತವು ಭೂಕುಸಿತ ಸಾಧ್ಯತೆ ಇರುವ ಕುಟುಂಬಗಳನ್ನು ಗುರುತಿಸಿ ಭೂಮಿ ವಶಪಡಿಸಿಕೊಂಡು ಪರಿಹಾರ ನೀಡುವ ಮೂಲಕ ಶೀಘ್ರವಾಗಿ ಸ್ಥಳಾಂತರಿಸಲು ಸೂಚನೆ ನೀಡಿರುವುದಾಗಿ ತಿಳಿಸಿದರು. ಜೊತೆಗೆ 90 ಡಿಗ್ರಿ ಕೋನದ ಗುಡ್ಡವನ್ನು 45 ಡಿಗ್ರಿ ಕೋನಾಕಾರದಲ್ಲಿ ಕತ್ತರಿಸುವಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜಿಲ್ಲಾಧಿಕಾರಿ ಸಿ. ಸತ್ಯಭಾಮ, ಉಪವಿಭಾಗಾಧಿಕಾರಿ ಶ್ರುತಿ, ತಹಸೀಲ್ದಾರ್ ಅರವಿಂದ್, ಕವಿತಾ ಹಾಗೂ ಇತರರಿದ್ದರು.


## ಅಶೋಕ್ ಹೇಳಿಕೆಗೆ ಖಂಡನೆ

ಶಾಸಕ ಕೆ.ಎಂ. ಶಿವಲಿಂಗೇಗೌಡ ಮಾತನಾಡಿ, ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಸ್ಥಳಕ್ಕೆ ಬಂದು ರಾಜ್ಯ ಸರ್ಕಾರದ ವಿರುದ್ಧ ಆಪಾದನೆ ಮಾಡಿದ್ದಾರೆ. ಆದರೆ ಈ ಯೋಜನೆಯು ರಾಜ್ಯ ಸರ್ಕಾರದ ಬಂಡವಾಳದಲ್ಲೂ ಅಲ್ಲ, ಜವಾಬ್ದಾರಿಯಲ್ಲೂ ಅಲ್ಲ. ಕಳೆದ ಒಂಬತ್ತು ವರ್ಷಗಳಿಂದ ಈ ಭಾಗದ ಜನರನ್ನು ಕೇಂದ್ರ ಸರ್ಕಾರವೇ ನೋಡಿಕೊಳ್ಳುತ್ತಿದೆ. ಉಚಿತವಾಗಿ ಗುತ್ತಿಗೆ ನೀಡಲಾಗಿದೆ. ಗುಣಮಟ್ಟ ಕಾಪಾಡಲು ನಾವು ಕೆಡಿಪಿ ಸಭೆಯಲ್ಲಿ ಒತ್ತಾಯಿಸುವಂತಹ ಪರಿಸ್ಥಿತಿ ಎದುರಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಈ ಹೆದ್ದಾರಿಗೆ ಕೋಟಿಗಟ್ಟಲೆ ಹಣ ವೆಚ್ಚವಾಗಿದೆ. ಈಗಾಗಲೇ ರಸ್ತೆ ಉದುರಿ ಹೋಗುತ್ತಿದೆ. ಈ ಯೋಜನೆಗೆ ಸಂಬಂಧಿಸಿದಂತೆ ಬಿಜೆಪಿ ನಾಯಕರು ಕೇಂದ್ರ ಸರ್ಕಾರವನ್ನು ಪ್ರಶ್ನಿಸಬೇಕು. ರಾಜ್ಯದ ಸಚಿವರ ವಿರುದ್ಧ ಆರೋಪಿಸುವುದು ಸರಿಯೇ ಎಂದು ಪ್ರಶ್ನಿಸಿದರು.

ರಸ್ತೆ ಬದಿಯ ಭೂಮಿಯನ್ನು 90 ಡಿಗ್ರಿಯಲ್ಲಿ ಕತ್ತರಿಸಿ ಕಾಮಗಾರಿ ಮಾಡಬಾರದೆಂದು ಅನೇಕ ಬಾರಿ ಹೇಳಿದ್ದರೂ ಸಹ ಯಾವುದೇ ಗಮನ ನೀಡಿಲ್ಲ. ಮೂರು ಹಂತಗಳಲ್ಲಿ ಕಾಮಗಾರಿ ನಡೆಸಬೇಕು. ಬೋಟರ್ಸ್ ಕಲ್ಲುಗಳಿಂದ ಗುಣಮಟ್ಟದ ಕೆಲಸ ಸಾಧ್ಯವಿಲ್ಲ. ಕಬ್ಬಿಣ ಬಳಸಿ ಕಾಂಕ್ರೀಟ್ ಹಾಕಬೇಕು ಎಂದು ಹೇಳಿದ್ದರೂ ಕೇಳುವುದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಶಾಸಕರಾದ ಹೆಚ್.ಕೆ. ಸುರೇಶ್, ಸಕಲೇಶಪುರ ಶಾಸಕ ಸಿಮೆಂಟ್ ಮಂಜು, ಸಂಸದ ಶ್ರೇಯಸ್ ಪಟೇಲ್, ಕಾಂಗ್ರೆಸ್ ಮುಖಂಡ ಮುರಳಿ ಮೋಹನ್, ಹೆದ್ದಾರಿ ಇಲಾಖೆ ಅಧಿಕಾರಿಗಳು ಹಾಜರಿದ್ದರು.

# ಹೃದಯಾಘಾತ: ಪದವಿ ವಿದ್ಯಾರ್ಥಿನಿ ಸಾವು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್




ಹಾಸನ: ಅಂತಿಮ ವರ್ಷದ ಪದವಿ ತರಗತಿ ಓದುತ್ತಿದ್ದ ವಿದ್ಯಾರ್ಥಿನಿ ಹೃದಯಾಘಾತದಿಂದ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಕೆಲವತ್ತಿ ಗ್ರಾಮದಲ್ಲಿ ನಡೆದಿದೆ.

ಕೆ.ವಿ. ಕವನ (21) ಮೃತ ವಿದ್ಯಾರ್ಥಿನಿ. ಗ್ರಾಮದ ಪಾಪಣ್ಣ-ಗಾಯತ್ರಿ ದಂಪತಿ ಪುತ್ರಿ ಕವನ ನಗರದ ಎಂ.ಜಿ. ರಸ್ತೆಯಲ್ಲಿರುವ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಅಂತಿಮ ವರ್ಷದ ಬಿ.ಕಾಂ. ಓದುತ್ತಿದ್ದಳು.

ಈಗಾಗಲೇ ಮೂರು ವಿಷಯಗಳ ಪರೀಕ್ಷೆ ಬರೆದಿದ್ದ ಕವನ, ಇನ್ನೂ ಮೂರು ಪರೀಕ್ಷೆ ಬರೆಯಬೇಕಿತ್ತು. ಶುಕ್ರವಾರ ನಾಲ್ಕನೇ ವಿಷಯದ ಪರೀಕ್ಷೆ ಬರೆಯಬೇಕಿತ್ತು. ಸಂಜೆ ಮನೆಗೆ ನೀರು ತರುತ್ತಿದ್ದ ಕವನಾಗೆ ದಿಢೀರ್ ಎದೆನೋವು ಕಾಣಿಸಿಕೊಂಡಿದ್ದು, ತಾಯಿ ಬಳಿ ಕುಡಿಯಲು ನೀರು ಕೇಳಿದ್ದಾಳೆ. ತಾಯಿ ನೀರು ತಂದು ಕೊಡುವಷ್ಟರಲ್ಲಿ ಮನೆಯಲ್ಲಿಯೇ ಕುಸಿದು ಬಿದ್ದಳು. ಕೂಡಲೇ ಕವನಾಳನ್ನು ಹಾಸನದ ಖಾಸಗಿ ಆಸ್ಪತ್ರೆಗೆ ಪೋಷಕರು ಕರೆತಂದರಾದರೂ, ಅಷ್ಟರಲ್ಲಾಗಲೇ ಕೊನೆಯುಸಿರೆಳೆದಿದ್ದಳು.

## ಜಿಲ್ಲೆಯಲ್ಲೂ ಕೋವಿಡ್ ಪ್ರಕರಣ ಪತ್ತೆ



ಹಾಸನ: ರಾಜ್ಯದಲ್ಲಿ ಕೋವಿಡ್ ಪ್ರಕರಣ ಉಲ್ಬಣಗೊಳ್ಳುತ್ತಿರುವ ಬೆನ್ನಲ್ಲೇ ಜಿಲ್ಲೆಯಲ್ಲೂ ಇಬ್ಬರಿಗೆ ದೃಢಪಟ್ಟಿದೆ.

ವೈದ್ಯಕೀಯ ವಿದ್ಯಾರ್ಥಿ ಹಾಗೂ 45 ವರ್ಷದ ಮಹಿಳೆಗೆ ಕೊರೊನಾ ದೃಢಪಟ್ಟಿದೆ. ವೈದ್ಯಕೀಯ ವಿದ್ಯಾರ್ಥಿ ಬೆಂಗಳೂರಿನಿಂದ ಹಾಸನಕ್ಕೆ ಬಂದಿದ್ದ. ಇನ್ನು ಮಹಿಳೆ ಗರ್ಭಕೋಶ ಶಸ್ತ್ರ ಚಿಕಿತ್ಸೆ ಗೆ ಒಳಗಾಗಿದ್ದರು. ಇಬ್ಬರನ್ನು ಐಸೋಲೇಟ್ ನಲ್ಲಿ ಇಡಲಾಗಿದ್ದು ಅವರಿಗೆ ಉಸಿರಾಟ ಸೇರಿ ಯಾವುದೇ ರೀತಿಯ ಸಮಸ್ಯೆ ಇಲ್ಲ ಎಂದು ವೈದ್ಯರು ತಿಳಿಸಿದ್ದಾರೆ.

# ಮಂಗಳೂರು ಪರಿಸ್ಥಿತಿ ಸರ್ಕಾರ ಗಂಭೀರವಾಗಿ ಪರಿಗಣಿಸಿದೆ



ಸಕಲೇಶಪುರ: ಮಂಗಳೂರಿನಲ್ಲಿ ಅಪರಾಧ ಕೃತ್ಯಗಳು ಹೆಚ್ಚುತ್ತಿದ್ದು ಸರ್ಕಾರ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿದೆ. ಪೊಲೀಸರು ತಮ್ಮ ಕೆಲಸ ಮಾಡುತ್ತಿದ್ದರೂ ಒಂದೊಂದು ಸಾರಿ ಅವರ ಕೈ ಮೀರಿ ಹೋಗಿರುತ್ತೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ಸುದ್ದಿಗಾರರೊಂದಿಗೆ ಗುರುವಾರ ಮಾತನಾಡಿ, ಸಿದ್ದರಾಮಯ್ಯ ಮತ್ತು ಬಿ.ಕೆ. ಹರಿಪ್ರಸಾದ್ ಒಳಗಡೆ ಬಾಗಿಲು ಹಾಕಿಕೊಂಡು ತಿಂಡಿ ತಿನ್ನುತ್ತಾ ಮಾತನಾಡಿದ್ದಾರೆ. ಏನು ಮಾತನಾಡಿದ್ದಾರೆ ಎಂದು ಬಾಗಿಲಿಗೆ ಕಿವಿ ಹಚ್ಚಿ ಕೇಳಲು ಆಗುತ್ತದೆಯೇ. ಒಳಗಡೆ ಮಾತನಾಡಿದರೆ ನಮಗೆ ಹೇಗೆ ಗೊತ್ತಾಗುತ್ತೆ. ಅವರಿಬ್ಬರು ಹಳೇ ಸ್ನೇಹಿತರು, ಅವರು ಹಿರಿಯರಿದ್ದಾರೆ. ರಾಜಕೀಯದಲ್ಲಿ ಯಾರು ಶತ್ರುನೂ ಅಲ್ಲ, ಮಿತ್ರನೂ ಅಲ್ಲ. ಒಮ್ಮೆ ಜಗಳ ಮಾಡುತ್ತಾರೆ, ಮತ್ತೊಮ್ಮೆ ಜೊತೆಯಲ್ಲಿಯೇ ಕೂರುತ್ತಾರೆ. ಇದಕ್ಕೆ ವಿಶೇಷ ಅರ್ಥ ಕಲ್ಪಿಸಬೇಕಿಲ್ಲ ಎಂದು ಹೇಳಿದರು.

ಶಾಸಕರಾದ ಎಸ್.ಟಿ. ಸೋಮಶೇಖರ್, ಶಿವರಾಮ್ ಹೆಬ್ಬಾರ್ ಕಾಂಗ್ರೆಸ್ ಸೇರ್ಪಡೆ ಬಗ್ಗೆ ಮಾತನಾಡಿ, ಮೊನ್ನೆ ಬಿಜೆಪಿ ಪಕ್ಷದಿಂದ ಉಚ್ಚಾಟನೆ ಮಾಡಿದ್ದಾರೆ. ಪಕ್ಷದ ಮಟ್ಟದಲ್ಲಿ ಅವರು ತೀರ್ಮಾನ ಮಾಡಬೇಕು. ನಮ್ಮ ಪಕ್ಷಕ್ಕೆ ಬರುತ್ತಾರೋ ಇಲ್ಲವೋ ಎಂದು ತೀರ್ಮಾನವಾಗಬೇಕು. ಆ ಬಳಿಕ ನಿರ್ಧಾರ ತೆಗೆದುಕೊಳ್ಳಲಾಗುವುದು. ಅಲ್ಲಿಯವರೆಗೂ ಕಾದು ನೋಡೋಣ ಎಂದರು.

ಮಂಗಳೂರು ಗಲಭೆ ಪ್ರಕರಣ, ಮುಸ್ಲಿಂ ಮುಖಂಡರಿಂದ ರಾಜೀನಾಮೆ ನೀಡುವ ವಿಚಾರಕ್ಕೆ ಪ್ರತಿಕ್ರಿಯಿಸಿ, ಆರೋಪಿಗಳ ವಿರುದ್ಧ ಪೊಲೀಸರು ಕ್ರಮ ಕೈಗೊಳ್ಳುತ್ತಾರೆ.

# ಹೊಳೆನರಸೀಪುರದಲ್ಲಿ ಬೃಹತ್ ತಿರಂಗಾ ಯಾತ್ರೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹೊಳೆನರಸೀಪುರ: ಪಹಲ್ಗಾಮ್ ನಲ್ಲಿ ನಡೆದ 26 ಭಾರತೀಯರ ಹತ್ಯೆಗೆ ಪ್ರತೀಕಾರವಾಗಿ ಭಾರತೀಯ ಸೇನೆ ನಡೆಸಿದ ಆಪರೇಷನ್ ಸಿಂದೂರ ಕಾರ್ಯಾಚರಣೆ ಯಶಸ್ಸಿನ ಹಿನ್ನೆಲೆಯಲ್ಲಿ ಗುರುವಾರ ಪಟ್ಟಣದಲ್ಲಿ ತಿರಂಗಾ ಯಾತ್ರೆ ನಡೆಸಲಾಯಿತು.

ಪ್ರಮುಖ ಬೀದಿ, ವೃತ್ತಗಳಲ್ಲಿ ಭಾರತಾಂಬೆಯ ಭಾವಚಿತ್ರದ ಮೆರವಣಿಗೆ ನಡೆಸಲಾಯಿತು. ಒಂದು ಕಿ.ಮೀ. ಉದ್ದದ ತಿರಂಗಾ ಹಿಡಿದ ಶಾಲಾ, ಕಾಲೇಜಿನ ವಿದ್ಯಾರ್ಥಿಗಳು ವಿಜಯ ಪತಾಕೆ ಹಾರಿಸಿದರು. ನಾನಾ ಸಂಘ, ಸಂಸ್ಥೆಗಳ ಅಧ್ಯಕ್ಷ ಪದಾಧಿಕಾರಿಗಳು, ರಾಜಕೀಯ ಪಕ್ಷದ ಮುಖಂಡರು ಪಕ್ಷ ಭೇದ ಮರೆತು ನಾವೆಲ್ಲ ಹಿಂದು ನಮ್ಮ ದೇಶ ಮುಂದು ಎಂದು ಭಾವೈಕ್ಯತೆ ಸಾರಿದರು. ನಿವೃತ್ತ ಸೈನಿಕರನ್ನು ತೆರೆದ ವಾಹನದಲ್ಲಿ ಮೆರವಣಿಗೆ ನಡೆಸಿ ಸನ್ಮಾನಿಸಲಾಯಿತು.

ಶಾಸಕ ಎಚ್.ಡಿ. ರೇವಣ್ಣ ಮಾತನಾಡಿ, ಪಾಕಿಸ್ತಾನದ ದುರ್ವರ್ತನೆಯಿಂದ ಅಮಾಯಕ ಪ್ರವಾಸಿಗರ ಮಾಂಗಲ್ಯ ಕಿತ್ತರು. ನಮ್ಮ ರಾಷ್ಟ್ರಸೇನೆ ತಕ್ಕ ಶಾಸ್ತಿ ಮಾಡಿದೆ. ಇದೊಂದು ಎಚ್ಚರಿಕೆಯ ಪಾಠವಾಗಿದೆ ಎಂದು ಹೇಳಿದರು.

ಮಲ್ಲದೇವನಪುರ ಗ್ರಾಮದ ವಿರಕ್ತಮಠದ ಡಾ. ಶ್ರೀ ಮಹಾಂತ ಬಸವಲಿಂಗ ಸ್ವಾಮೀಜಿ ಮಾತನಾಡಿ, ದೇಶಕ್ಕಾಗಿ ನಾವು ಎಂತಹದ್ದೇ ತ್ಯಾಗಕ್ಕೂ ಸಿದ್ದರಾಗಬೇಕು. ಇಂದಿನ ಪೀಳಿಗೆಗೆ ರಾಷ್ಟ್ರ ಪ್ರೇಮವನ್ನು ಬೆಳೆಸಬೇಕಾಗಿಲ್ಲ. ಇಲ್ಲಿನ ಸಂಸ್ಕೃತಿಯೇ ಅವರಲ್ಲಿ ದೇಶಪ್ರೇಮವನ್ನು ಬೆಳೆಸುತ್ತದೆ. ಸೈನಿಕರ ಕುಟುಂಬ ವರ್ಗದ ಕೆಲಸ ಕಾರ್ಯಕ್ಕೆ ನಾಗರೀಕರಾದ ನಾವುಗಳು ಸಹಕರಿಸಬೇಕು. ನಿವೃತ್ತ ಸೈನಿಕರು ಕಚೇರಿ ಕೆಸಲಗಳಿಗೆ ಬಂದಾಗ ಅಧಿಕಾರಿಗಳು ಸ್ಪಂದಿಸುವ ಕೆಲಸ ಮಾಡಬೇಕು ಎಂದು ತಿಳಿಸಿದರು.

ಬಿಜೆಪಿ ಮುಖಂಡ ದೇವರಾಜೇಗೌಡ, ಪುರಸಭೆ ಅಧ್ಯಕ್ಷ ಎಚ್.ಕೆ. ಪ್ರಸನ್ನ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಚ್.ಟಿ.ಲಕ್ಷ್ಮಣ್, ಜೆಡಿಎಸ್ ಮುಖಂಡ ಪುಟ್ಟಸ್ವಾಮಪ್ಪ, ಬಿಜೆಪಿ ತಾಲ್ಲೂಕು ಅಧ್ಯಕ್ಷ ಶ್ರೀಪತಿ, ಕೇಂದ್ರ ಕೃಷಿ ಸಂಶೋಧನಾ ಮಂಡಳಿ ಸದಸ್ಯ ಮಳಲಿ ನಾರಾಯಣ್, ಕರವೇ ಅಧ್ಯಕ್ಷ ವಹಿಲೇಶ್, ನಿವೃತ್ತ ಸೈನಿಕರಾದ ಈಶ್ವರ್, ವಸಂತ್‌ಕುಮಾರ್, ಮಹದೇವಯ್ಯ, ಬಸಪ್ಪ, ಚಂದ್ರಕಾಂತ್, ರವಿಕುಮಾರ್, ರಮೇಶ್, ಚನ್ನಕೇಶವ, ನಿಂಗರಾಜು ಇತರರಿದ್ದರು.

# ಹಾಡಹಗಲೇ 16 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು

ಹೊಳೆನರಸೀಪುರ: ಮನೆ ಮುಂಭಾಗದಲ್ಲಿ ಇಟ್ಟಿದ್ದ ಕೀ ಸಹಾಯದಿಂದ ಹಾಡಹಗಲೇ ಒಳನುಗ್ಗಿರುವ ಕಳ್ಳರು 16 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿರುವ ಘಟನೆ ತಾಲ್ಲೂಕಿನ ತೇರಣ್ಯ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಂಜುಂಡಪ್ಪ ಅವರ ಮನೆಯಲ್ಲಿ ಕಳ್ಳತನ ನಡೆದಿದೆ. ಮನೆಗೆ ಬೀಗ ಹಾಕಿ ಹೆಂಡತಿ ಪುಷ್ಪ ಅವರೊಂದಿಗೆ ಜಮೀನು ಕೆಲಸಕ್ಕೆ ತೆರಳಿದ್ದಾಗ ಬಂದಿರುವ ಕಳ್ಳರು ಅಲ್ಲಿಯೇ ಇಟ್ಟಿದ್ದ ಕೀ ನೆರವಿನಿಂದ ಮುಂಬಾಗಿಲು ತೆರೆದು ಪ್ರವೇಶಿಸಿದ್ದಾರೆ. ಮಧ್ಯದ ಬಾಗಿಲನ್ನು ಮುರಿದು ಬೀರುವಿನಲ್ಲಿಟ್ಟಿದ್ದ 48 ಗ್ರಾಂ ತೂಕದ ಎರಡು ಎಳೆಯ ಚಿನ್ನದ ಸರ, 33 ಗ್ರಾಂ ತೂಕದ ಕೆಂಪು ಹವಳದ ಒಂದು ಜೊತೆ ಚಿನ್ನದ ಕೈ ಬಳೆ, 12 ಗ್ರಾಂ ತೂಕದ ಚಿನ್ನದ ಗುಂಡಿನ ಸರ, 11 ಗ್ರಾಂ ತೂಕದ ಒಂದು ಜೊತೆ ಚಿನ್ನದ ಮುತ್ತಿನ ಓಲೆ, 6 ಗ್ರಾಂ ತೂಕದ ಕೆಂಪು ಹರಳಿನ ಒಂದು ಜೊತೆ ಚಿನ್ನದ ಓಲೆ ಮತ್ತು ಹ್ಯಾಂಗಿಂಗ್ಸ್, 5 ಗ್ರಾಂ ತೂಕದ ಒಂದು ಜೊತೆ ಚಿನ್ನದ ಓಲೆ ಜುಮುಕಿ, 18 ಗ್ರಾಂ ತೂಕದ ಚಿನ್ನದ ಕೈ ಚೈನು,

5 ಗ್ರಾಂ ತೂಕದ ಕಂದು ಬಿಳಿ ಹಸಿರು ಹರಳಿನ ಒಂದು ಜೊತೆ ಓಲೆ ಜುಮುಕಿ, 4 ಗ್ರಾಂ ತೂಕದ ಬಿಳಿ ಹರಳಿನ ಚಿನ್ನದ ಲಕ್ಷ್ಮೀ ಹ್ಯಾಂಗಿಂಗ್ಸ್, 3 ಗ್ರಾಂ ತೂಕದ ಚಿನ್ನದ ಉಂಗುರ, 4 ಗ್ರಾಂ ತೂಕದ ಒಂದು ನೀಲಿ ಹರಳಿನ ಚಿನ್ನದ ಉಂಗುರ, 3 ಗ್ರಾಂ ತೂಕದ ಒಂದು ಜೊತೆ ಫ್ಯಾನ್ಸಿ ಓಲೆ, 4 ಗ್ರಾಂ ತೂಕದ ಒಂದು ಜೊತೆ ಸಾಧಾ ಚಿನ್ನದ ಮಾಟಿ, 30 ಗ್ರಾಂ ತೂಕದ ಚಿನ್ನ ಮಾಂಗಲ್ಯ ಸರ, 10 ಗ್ರಾಂ ತೂಕದ ಬಿಳಿ ಹರಳಿನ ಒಂದು ಜೊತೆ ಚಿನ್ನದ ಓಲೆ ಮತ್ತು ಮಾಟಿ, 3 ಗ್ರಾಂ ತೂಕದ ಒಂದು ಚಿನ್ನದ ಉಂಗುರ, 1.5 ಗ್ರಾಂ ತೂಕದ ಚಿನ್ನದ ಉಂಗುರ, 50 ಗ್ರಾಂ ತೂಕದ ಬೆಳ್ಳಿಯ ಕಾಲುಚೈನು ಕದ್ದಿದ್ದಾರೆ.

ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಕೆಲಸದ ಸಮಯ ಗೊತ್ತುಪಡಿಸಿದ ಡಿಸಿ

ಹಾಸನ: ಕಾಡಾನೆ ಉಪಟಳ ಹೆಚ್ಚಿರುವ ಹಿನ್ನಲೆಯಲ್ಲಿ ಕೂಲಿ ಕಾರ್ಮಿಕರು ಬೆಳಿಗ್ಗೆ 9 ರಿಂದ ಸಂಜೆ 5ರ ವರೆಗೆ ಮಾತ್ರ ಕೆಲಸಕ್ಕೆ ತೆರಳಬೇಕು ಎಂದು ಜಿಲ್ಲಾಧಿಕಾರಿ ಸಿ. ಸತ್ಯಭಾಮ ಆದೇಶಿಸಿದ್ದಾರೆ. ಕೂಲಿ ಕಾರ್ಮಿಕರು, ರೈತರು ಹಾಗೂ ದಾರಿಹೋಕರನ್ನು ಗುರಿಯಾಗಿಸಿ ಆನೆಗಳು ದಾಳಿ ನಡೆಸುತ್ತಿವೆ. ನಾಲ್ಕು ತಿಂಗಳಲ್ಲಿ ಬೇಲೂರು ತಾಲ್ಲೂಕು ಒಂದರಲ್ಲೇ ಮೂವರು ಮಹಿಳೆಯರು ಹಾಗು ಒಬ್ಬ ಪುರುಷ ಸೇರಿ ನಾಲ್ವರು ಮೃತಪಟ್ಟಿದ್ದಾರೆ.

ಬಿಕ್ಕೋಡು, ಅರೇಹಳ್ಳಿ ಮತ್ತು ಕಸಬಾ ಹೋಬಳಿಯಲ್ಲಿ ಕಾಡಾನೆಗಳ ಹಾವಳಿ ಹೆಚ್ಚಾಗಿದೆ.

ಬೆಳಿಗ್ಗೆ 8 ರಿಂದ ಸಂಜೆ 6ರ ಸಮಯದಲ್ಲಿ ಕಾಡಾನೆಗಳು ಸಂಚರಿಸುತ್ತಿವೆ. ಈ ಸಮಯದಲ್ಲೇ ಕಾರ್ಮಿಕರು ಸಂಚರಿಸುವುದರಿಂದ ಆನೆಗಳು ಸಾರ್ವಜನಿಕರನ್ನು ಗುರಿಯಾಗಿಸಿಕೊಂಡಿವೆ. ಹೀಗಾಗಿ ಬೆಳಿಗ್ಗೆ 9 ರಿಂದ ಸಂಜೆ 5ರ ವರೆಗೆ ಕೆಲಸದ ಸಮಯ ನಿಗದಿಪಡಿಸಬೇಕು ಎಂದು ಅವರು ಸೂಚಿಸಿದ್ದಾರೆ.

# 2028ರಲ್ಲಿ ಹಾಸನದ 7 ಕ್ಷೇತ್ರ ಗೆಲುವು ಖಚಿತ

## ಜಿಲ್ಲೆಯ ಬಿಜೆಪಿ-ಜೆಡಿಎಸ್ ಕಾರ್ಯಕರ್ತರ ಸೇರ್ಪಡೆ | ಡಿಸಿಎಂ ಡಿಕೆಶಿ ಭರವಸೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಬೆಂಗಳೂರು: ಹಾಸನ ಜಿಲ್ಲೆಯ ಜನ ದೇವೇಗೌಡರ ಕುಟುಂಬದ ನಾಣ್ಯದ ಎರಡೂ ಮುಖಗಳನ್ನು ನೋಡಿಯಾಗಿದೆ. ಹೀಗಾಗಿ 2028ರ ಚುನಾವಣೆಯಲ್ಲಿ ಹಾಸನದ 7ಕ್ಕೆ 7 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲ್ಲುವ ಅವಕಾಶವಿದೆ ಎಂದು ಕೆಪಿಸಿಸಿ ಅಧ್ಯಕ್ಷರೂ ಆದ ಡಿಸಿಎಂ ಡಿ.ಕೆ. ಶಿವಕುಮಾರ್ ಕಾರ್ಯಕರ್ತರಿಗೆ ಕರೆ ನೀಡಿದರು.

ಕೆಪಿಸಿಸಿ ಕಚೇರಿಯ ಭಾರತ ಜೋಡೋ ಸಭಾಂಗಣದಲ್ಲಿ ಗುರುವಾರ ಹಾಸನ ಜಿಲ್ಲೆಯ ಬಿಜೆಪಿ ಹಾಗೂ ಜೆಡಿಎಸ್ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್ ಮಾತನಾಡಿದರು.

ಕಳೆದ ಚುನಾವಣೆಯಲ್ಲಿ ಒಂದೆರಡು ಕ್ಷೇತ್ರಗಳಲ್ಲಿ ನಮ್ಮವರೇ ನಮಗೆ ಮೋಸ ಮಾಡಿದ್ದಾರೆ. ಅದು ನನಗೆ ಗೊತ್ತಿದೆ. ಮುಂದಿನ ಚುನಾವಣೆಗೆ ನಾವು ಸಿದ್ಧರಾಗೋಣ. ಬಿಜೆಪಿ ಹಾಗೂ ಜೆಡಿಎಸ್‌ನ ನಾಯಕರು ಸಾವಿರ ಬಾರಿ ತಬ್ಬಿಕೊಳ್ಳಲಿ. ಆದರೆ ಕಾರ್ಯಕರ್ತರು ಒಂದಾಗಲು ಸಾಧ್ಯವೇ ಇಲ್ಲ. ಆ ಪಕ್ಷಗಳಲ್ಲಿ ನಾಯಕರನ್ನು ಬಳಸಿ ಬಿಸಾಡುತ್ತಾರೆ ಎಂದು ತಿಳಿಸಿದರು.

ಕಾಂಗ್ರೆಸ್ ಪಕ್ಷ ಸಮುದ್ರವಿದ್ದಂತೆ ಈ ಸಮುದ್ರದಲ್ಲಿ ತಿಮಿಂಗಲ, ವಜ್ರ, ಸಣ್ಣ ಮೀನು, ದೊಡ್ಡ ಮೀನು ಎಲ್ಲವೂ ಇರುತ್ತದೆ. ಎಲ್ಲದಕ್ಕೂ ಈ ಸಮುದ್ರ ಆಸರೆಯಾಗಿರುತ್ತದೆ. ಈ ಪಕ್ಷಕ್ಕೆ ತನ್ನದೇ ಆದ ದೊಡ್ಡ ಇತಿಹಾಸವಿದೆ. ಈ ಪಕ್ಷದ ಧ್ವಜ ದೇಶಕ್ಕೆ ರಾಷ್ಟ್ರಧ್ವಜವನ್ನು ತಯಾರಿಸಿಕೊಟ್ಟಿದೆ. ದೇಶಕ್ಕೆ ಸಂವಿಧಾನ, ರಾಷ್ಟ್ರಗೀತೆ ಕೊಟ್ಟ ಪಕ್ಷ ಇದು. ಕಾರಣಾಂತರಗಳಿಂದ ನಮ್ಮ ಪಕ್ಷ ಕೆಲವು ಕಡೆ ಹಿನ್ನಡೆ ಅನುಭವಿಸಿರಬಹುದು. ಆದರೆ ಈ ಹಿನ್ನಡೆ ಶಾಶ್ವತವಾಗಿರಲು ಸಾಧ್ಯವಿಲ್ಲ ಎಂದರು.

ಬಹಳ ಜನ ಕಾಂಗ್ರೆಸ್ ಪಕ್ಷಕ್ಕೆ ಸೇರಬೇಕು ಎಂದು ಬಯಸಿದ್ದಾರೆ. ಹೀಗಾಗಿ ಸ್ಥಳೀಯ ಮುಖಂಡರಿಗೆ ಪಕ್ಷ ಸೇರ್ಪಡೆ ಬಗ್ಗೆ ಸಂದೇಶ ನೀಡಿದ್ದೇನೆ. ನಮ್ಮ ಪಕ್ಷದ ಮೇಲೆ ನಂಬಿಕೆ ಇಟ್ಟು ಪಕ್ಷ ಸೇರಲು ಬಂದಿರುವ ಎಲ್ಲರಿಗೂ ಪಕ್ಷದ ಅಧ್ಯಕ್ಷನಾಗಿ ಸ್ವಾಗತಿಸುತ್ತೇನೆ. ಹಾಸನ ಜಿಲ್ಲೆಗೆ ಪಿಡ್ಲ್ಯೂಡಿ ಸಚಿವರು ಪ್ರವಾಸ ಕೈಗೊಂಡಿರುವ ಹಿನ್ನೆಲೆಯಲ್ಲಿ ನಿಮ್ಮ ಲೋಕಸಭಾ ಸದಸ್ಯರಿಗೆ ಈ ಕಾರ್ಯಕ್ರಮಕ್ಕೆ ಬರಬೇಡಿ ಎಂದು ನಾನೇ ಹೇಳಿದೆ. ಸಚಿವರು ಜಿಲ್ಲೆಗೆ ಬಂದಾಗ ಯಾರಾದರೂ ಅವರ ಜತೆಯಲ್ಲಿ ಇರಬೇಕು ಎಂದು ಸಲಹೆ ನೀಡಿದೆ ಎಂದು ತಿಳಿಸಿದರು.

ಇತ್ತೀಚೆಗೆ ದೇಶ ಯುದ್ಧದ ಪರಿಸ್ಥಿತಿ ಎದುರಾದಾಗ ಎಲ್ಲರೂ ಸ್ಮರಿಸಿದ್ದು ಇಂದಿರಾ ಗಾಂಧಿ ಅವರನ್ನು. ಬೆಂಗಳೂರಿನಲ್ಲಿರುವ ಬಹುತೇಕ ಎಲ್ಲಾ ಸಾರ್ವಜನಿಕ ಉದ್ಯಮಗಳು ಪ್ರಾರಂಭವಾಗಿದ್ದೇ ನೆಹರೂ ಅವರ ಕಾಲದಲ್ಲಿ. ದೇಶದಲ್ಲಿನ ಪ್ರಮುಖ ಅಣೆಕಟ್ಟುಗಳನ್ನು ಕಟ್ಟಿದ್ದು ಕಾಂಗ್ರೆಸ್ ಅವಧಿಯಲ್ಲಿ. ಬಿಜೆಪಿ, ದಳದ ಅವಧಿಯಲ್ಲಿ ಒಂದು ಅಣೆಕಟ್ಟು ಕಟ್ಟಲಾಗಿದೆಯೇ? ನಿಮ್ಮ ಜಿಲ್ಲೆಯಿಂದ ಎತ್ತಿನಹೊಳೆ ಕುಡಿಯುವ ನೀರನ್ನು ತರುತ್ತಿದ್ದೇವೆ. ಈ ಯೋಜನೆಯನ್ನು ಮಾಡಿದ್ದು ಕಾಂಗ್ರೆಸ್ ಪಕ್ಷವೇ ಹೊರತು ಜೆಡಿಎಸ್, ಬಿಜೆಪಿ ಅಲ್ಲ ಎಂದರು.

ರಾಜ್ಯದಲ್ಲಿ ಬಿಜೆಪಿ ಎಂಟು ವರ್ಷ ಕುಮಾರಸ್ವಾಮಿ ಅವರು 3-4 ವರ್ಷ ಸರ್ಕಾರ ಮಾಡಿದ್ದಾರೆ. ದೇವೇಗೌಡರು 20 ತಿಂಗಳು ಮುಖ್ಯಮಂತ್ರಿಯಾಗಿದ್ದರು. ಜೆ.ಹೆಚ್ ಪಟೇಲ್ ಇದ್ದರು. ಅವರ ಸರ್ಕಾರದ ಅವಧಿಯಲ್ಲಿನ ಯಾವ ಯೋಜನೆಯನ್ನು ನೀವು ಉದಾಹರಣೆಯಾಗಿ ನೀಡುತ್ತೀರಿ ಎಂದು ಸವಾಲು ಹಾಕಿದರು.

ಹಾಸನದಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಒಂದಾಗಲು ಸಾಧ್ಯವೇ? ಮೈತ್ರಿ ಸರ್ಕಾರವನ್ನು ಕೆಡವಲು ಕಾಂಗ್ರೆಸ್ ಪಕ್ಷವನ್ನು ಬಿಟ್ಟ ಎಲ್ಲಾ ಶಾಸಕರಿಗೂ ನಾನು ಸದನದಲ್ಲಿ ಒಂದು ಮಾತು ಹೇಳಿದ್ದೆ. ಬಿಜೆಪಿಯಲ್ಲಿ ನೀವೆಲ್ಲರೂ ರಾಜಕೀಯ ಸಮಾಧಿಯಾಗುತ್ತೀರಿ ಎಂದು ಹೇಳಿದ್ದೆ. ಈಗ ಬಿಜೆಪಿ ಸಂಸದ ಸುಧಾಕರ್ ಅವರು ಬಿಜೆಪಿಯಲ್ಲಿ ನನ್ನನ್ನು ರಾಜಕೀಯ ಸಮಾಧಿ ಮಾಡಿದ್ದಾರೆ ಎಂದು ಹೇಳಿದ್ದಾರೆ. ಈಗ ಸೋಮಶೇಖರ್, ಹೆಬ್ಬಾರ್ ಅವರ ಕಥೆ ಏನಾಯ್ತು. ಸಿ.ಪಿ ಯೋಗೇಶ್ವರ್ ಕತೆ ಏನಾಯ್ತು. ಈಗ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿ ಶಾಸಕರಾಗಿದ್ದಾರೆ. ಎಂಟಿಬಿ ನಾಗರಾಜ್, ಬಿ.ಸಿ ಪಾಟೀಲ್ ಏನಾದರು. ರಾಯಚೂರು, ಮಸ್ಕಿ ಕ್ಷೇತ್ರದಲ್ಲಿ ಏನಾಯ್ತು. ಶ್ರೀಮಂತ ಪಾಟೀಲ್, ಮಹೇಶ್ ಕುಮಟಳ್ಳಿ, ರಾಜರಾಜೇಶ್ವರಿ ನಗರ ಶಾಸಕನ ಪರಿಸ್ಥಿತಿ ಏನಾಗಿದೆ ಎಂದರು.

# ಡೆಂಗ್ಯೂ ತಡೆಗೆ ಎಲ್ಲರ ಸಹಕಾರ ಅಗತ್ಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಅರಕಲಗೂಡು: ಡೆಂಗ್ಯೂ ಸೋಲಿಸಲು ದಿಟ್ಟ ಹೆಜ್ಜೆ ಮತ್ತು ಪರಿಶೀಲಿಸಿ ಸ್ವಚ್ಛಗೊಳಿಸಿ ಮುಚ್ಚಿಡಿ ಎಂಬ ಘೋಷಣೆಯೊಂದಿಗೆ ಆರೋಗ್ಯ ಇಲಾಖೆ ಜಾಗೃತಿ ಕಾರ್ಯಗಳನ್ನು ಕೈಗೊಂಡಿದ್ದು, ಅದಕ್ಕೆ ಪಂಚಾಯತಿ ಆಡಳಿತ ಸೇರಿ ತಾಲ್ಲೂಕಿನ ಎಲ್ಲಾ ಗ್ರಾಪಂ ಆಡಳಿತ ಸಹಕಾರ ನೀಡಬೇಕೆಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಪುಷ್ಪಲತಾ ತಿಳಿಸಿದರು.

ಬುಧವಾರ ತಾಪಂ ಸಭಾಂಗಣದಲ್ಲಿ ರಾಷ್ಟ್ರೀಯ ಡೆಂಗ್ಯೂ ದಿನದ ಅಂಗವಾಗಿ ಗ್ರಾಪಂಗಳ ಅಭಿವೃದ್ಧಿ ಅಧಿಕಾರಿಗಳಿಗೆ ಹಮ್ಮಿಕೊಂಡಿದ್ದ ತರಬೇತಿ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಸಮುದಾಯದೊಂದಿಗೆ ಜೊತೆ ಸೇರಿ ಕೆಲಸ ಮಾಡುವ ಅವಕಾಶ ತಾಪಂ ಮತ್ತು ಗ್ರಾಪಂಗಳಿಗೆ ಇದೆ.ಈ ನಿಟ್ಟಿನಲ್ಲಿ ಡೆಂಗಿ ಜ್ವರ ನಿಯಂತ್ರಣ,ಸೊಳ್ಳೆಗಳ ನಿರ್ಮೂಲನೆಗೆ ಸ್ವಚ್ಛತೆಯಿಂದ ಮಾತ್ರ ಸಾಧ್ಯವಾಗುತ್ತದೆ. ಈಗಾಗಲೇ ಮಳೆ ಪ್ರಮಾಣ ಅಧಿಕಗೊಂಡಿದ್ದು, ಚರಂಡಿ, ಹಳ್ಳ, ಗುಂಡಿ ಇತರೆ ಅನುಪಯುಕ್ತ ತ್ಯಾಜ್ಯಗಳಲ್ಲಿ ನೀರು ಶೇಖರಣೆಯಾಗಿ ಸೊಳ್ಳೆಗಳ ಉತ್ಪತ್ತಿಗೆ ಸಹಕಾರಿಯಾಗಲಿದೆ. ತ್ವರಿತವಾಗಿ ಗ್ರಾಮಗಳಲ್ಲಿ ಸ್ವಚ್ಛತೆಗೆ ಮುಂದಾಗಬೇಕಿದೆ ಎಂದು ಮನವಿ ಮಾಡಿದರು.

ಡೆಂಗ್ಯೂ ವೈರಾಣುವಿನಿಂದ ಉಂಟಾಗುವ ರೋಗ,ಇವು ಸೋಂಕಿತ ಈಡಿಸ್ ಜಾತಿಯ ಸೊಳ್ಳೆಗಳ ಕಚ್ಚುವಿಕೆಯಿಂದ ಒಬ್ಬರಿಂದ ಮತ್ತೊಬ್ಬರಿಗೆ ಹರಡುತ್ತದೆ.ಈ ಸೊಳ್ಳೆಗಳು ಸಾಮಾನ್ಯವಾಗಿ ಹಗಲು ಹೊತ್ತಿನಲ್ಲಿ ಕಚ್ಚುತ್ತವೆ.ಇದರಿಂದ ತೀವ್ರ ಜ್ವರ,ತಲೆನೋವು,ಕಣ್ಣುಗಳ ಹಿಂಭಾಗದಲ್ಲಿ ನೋವು,ಮಾಂಸಖಂಡ ಮತ್ತು ಕೀಲುಗಳಲ್ಲಿ ನೋವು,ಮೂಗು ಮತ್ತು ವಸಡಿನಲ್ಲಿ ರಕ್ತಸ್ರಾವ,ಕಪ್ಪು ಮಲ ವಿಸರ್ಜನೆ ಮತ್ತು ಚಡಪಡಿಸುವಿಕೆ ಅಥವಾ ಜ್ಞಾನ ತಪ್ಪುವುದು ಈ ಎಲ್ಲಾ ಲಕ್ಷಣಗಳಿದ್ದರೇ ಕೂಡಲೇ ವೈದ್ಯರಿಗೆ ತೋರಿಸಬೇಕು.ಈ ವಿಚಾರಗಳನ್ನು ಜನರಿಗೆ ತಿಳಿಸುವ ಕೆಲಸವನ್ನು ಮಾಡಬೇಕೆಂದು ತಿಳಿಸಿದರು.

ತಾಲೂಕಿನ ಎಲ್ಲಾ ಅಂಗನವಾಡಿಗಳ ಮಕ್ಕಳ ಬಗ್ಗೆ ಡೆಂಗ್ಯೂ ಜ್ವರ ಕುರಿತು ಅರಿವು ಮೂಡಿಸುವ ಜತೆಗೆ ಗ್ರಾಪಂ ವತಿಯಿಂದ ಸೊಳ್ಳೆ ಪರದೆಗಳನ್ನು ನೀಡಲು ಕ್ರಮಕೈಗೊಳ್ಳಬೇಕಿದೆ. ಶಾಲೆಗಳು,ಅಂಗನವಾಡಿ ಕೇಂದ್ರಗಳ ಸುತ್ತಾಮುತ್ತ ತ್ಯಾಜ್ಯ ಬೆಳೆದಿದ್ದರೇ ಸ್ವಚ್ಛಗೊಳಿಸಬೇಕು.ಅಲ್ಲದೆ ಮಲೀನ ನೀರು ನಿಲ್ಲದಂತೆ ಕ್ರಮವಹಿಸಿ ಎಂದು ಪಿಡಿಒಗಳಿಗೆ ತಾಪಂ ಇಒ ಪ್ರಕಾಶ್ ಸೂಚನೆ ನೀಡಿದರು.

ಮಾನವ ಸಂಪನ್ಮೂಲ ಅಧಿಕಾರಿ ಹಾಗೂ ಕೀಟಶಾಸ್ತ್ರಜ್ಞ ಡಾ. ರಾಜೇಶ್ ಕುಲಕರ್ಣಿ ಅವರು ಮಾಹಿತಿ ನೀಡಿದರು. ಆರೋಗ್ಯ ಇಲಾಖೆ ಅಧಿಕಾರಿಗಳಾದ ರಾಮಪ್ಪ, ಜನಾರ್ಧನ್, ಚಂದ್ರೇಗೌಡ, ಪರಮೇಶ್ ಮತ್ತು ಎಲ್ಲಾ ಗ್ರಾಪಂಗಳ ಪಿಡಿಒಗಳು ಉಪಸ್ಥಿತರಿದ್ದರು.

# ಪೌತಿ ಖಾತಾ ಆಂದೋಲನ ಯಶಸ್ಸಿಗೆ ಸೂಚನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಅರಕಲಗೂಡು: ರಾಜ್ಯ ಸರ್ಕಾರ ಕೈಗೊಂಡಿರುವ ಪೌತಿ ಖಾತಾ ಆಂದೋಲನ ರೈತರಿಗೆ ಅನುಕೂಲಕರವಾಗಿದ್ದು, ಸಕಾಲದಲ್ಲಿ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿ ಪ್ರಯೋಜನ ಪಡೆದುಕೊಳ್ಳಬೇಕು ಎಂದು ಶಾಸಕ ಎ. ಮಂಜು ಮನವಿ ಮಾಡಿದರು.

ತಾಲ್ಲೂಕಿನ ರಾಮನಾಥಪುರದ ಅಂಬೇಡ್ಕರ್ ಭವನದಲ್ಲಿ ಕಂದಾಯ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ಪೌತಿಖಾತೆ ಆಂದೋಲನ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಇನ್ನೂ ಕೂಡ ಮೂರು ತಲೆಮಾರಿನ ಕೃಷಿ ಭೂಮಿ ಹಂಚಿಕೆಯನ್ನು ಜನರು ಮಾಡಿಕೊಂಡಿಲ್ಲದಿರುವುದು ಕಂಡುಬಂದಿದೆ.

ಭೂಮಿ ಇದೆ ಎಂದು ಕೃಷಿ ಕಾಯಕ ಕೈಗೊಂಡರೇ ಸಾಲದು, ಅದು ನಿಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡರೆ ಸರ್ಕಾರದಿಂದ ದೊರೆಯುವ ಸವಲತ್ತುಗಳನ್ನು ಪಡೆದುಕೊಳ್ಳಬಹುದಾಗಿದೆ. ಕಂದಾಯ ಇಲಾಖೆ ಅಧಿಕಾರಿ, ಸಿಬ್ಬಂದಿ ನಿಮ್ಮ ಬಳಿಗೆ ಬಂದು ಮಾಹಿತಿ ನೀಡುವರು. ಸಕಾಲದಲ್ಲಿ ಪ್ರಯೋಜನ ಪಡೆದುಕೊಳ್ಳಬೇಕೆಂದು ಸಲಹೆ ಮಾಡಿದರು.

ಇದುವರೆಗೂ ಖಾತೆ ಮಾಡಿಸದೆ ಇರುವ ರೈತರು ಸಂಬಂಧಪಟ್ಟ ದಾಖಾಲಾತಿಗಳಾದ ವಂಶವೃಕ್ಷ, ಮರಣ ಧೃಢೀಕರಣ ಹಾಗೂ ಇತರೆ ದಾಖಲಾತಿ ಸಲ್ಲಿಸಿ ಪೌತಿ ಖಾತೆ ಮಾಡಿಸಿಕೊಳ್ಳಬೇಕಿದೆ.

ಅಲ್ಲದೆ ಈ ವಿಚಾರವಾಗಿ ತಮ್ಮ ಗ್ರಾಮಗಳಲ್ಲಿ ಎಲ್ಲರಿಗೂ ತಿಳಿಹೇಳಬೇಕೆಂದು ಅಲ್ಲಿ ನೆರದಿದ್ದ ರೈತರಿಗೆ ತಿಳಿಸಿದರು.

ತಹಸೀಲ್ದಾರ್ ಕೆ.ಸಿ. ಸೌಮ್ಯ ಮಾತನಾಡಿ, ತಾಲ್ಲೂಕು ಕಚೇರಿಯ ಕೆಲಸಗಳಲ್ಲಿ ಯಾವುದೇ ರೀತಿಯ ತೊಂದರೆ, ವಿಳಂಬವಾದಲ್ಲಿ ನನ್ನನ್ನು ನೇರವಾಗಿ ಭೇಟಿಯಾಗಿ ರೈತರು ಹಾಗೂ ಸಾರ್ವಜನಿಕರು ಕೆಲಸಗಳನ್ನು ಮಾಡಿಸಿಕೊಳ್ಳಿ, ಹೋಬಳಿಗಳ ಕಂದಾಯ ಅಧಿಕಾರಿ, ಸಿಬ್ಬಂದಿ ವಿನಃ ಕಾರಣ ತೊಂದರೆ ನೀಡುತ್ತಿದ್ದರೇ ಲಿಖಿತವಾಗಿ ದೂರು ನೀಡಿ. ಈ ವಿಚಾರವನ್ನು ಮೇಲಾಧಿಕಾರಿಗಳ ಗಮನಕ್ಕೆ ತಂದು ನ್ಯಾಯ ದೊರಕಿಸುವ ಕೆಲಸ ಮಾಡುತ್ತೇನೆ ಎಂದು ಹೇಳಿದರು.

ರೈತರಿಗೆ ತುಂಬಾ ಅವಶ್ಯವಿರುವ ಪೌತಿಖಾತೆ ಕಾರ್ಯಕ್ರಮವನ್ನು ಜಾರಿಗೆ ತಂದಿದೆ.ಆಯಾ ಗ್ರಾಮ ಲೆಕ್ಕಾಧಿಕಾರಿಗಳು,ಸಹಾಯಕರು ಜನರಿಗೆ ಮಾಹಿತಿ ನೀಡಿ ಯಶಸ್ವಿಗೆ ಸಹಕಾರ ನೀಡಬೇಕಿದೆ ಎಂದು ಸೂಚನೆ ನೀಡಿದರು.

ಸರ್ಕಾರಿ ಜಾಗದಲ್ಲಿ ಅಕ್ರಮವಾಗಿ ನಿರ್ಮಿಸಿರುವ ಮನೆಗಳಿಗೆ 94ಸಿ ಅಡಿಯಲ್ಲಿ ಹಕ್ಕು ಪತ್ರ ಹಾಗೂ ವಿವಿಧ ಪಿಂಚಣಿ ಯೋಜನೆಗಳ ಆದೇಶ ಪ್ರತಿಗಳನ್ನು ಶಾಸಕರು ವಿತರಿಸಿದರು.

ಗ್ರೇಡ್ 2 ತಹಸೀಲ್ದಾರ್ ಸಿ. ಸ್ವಾಮಿ, ಶಿರಸ್ತೆದಾರ್ ಡಿ. ಸೋಮಶೇಖರ್, ಉಪ ತಹಸೀಲ್ದಾರ್ ರವಿ, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಪವನಕುಮಾರಿ, ಸದಸ್ಯರಾದ ಸುನಿಲ್, ಪುಷ್ಪ, ರಾಜಸ್ವ ನಿರೀಕ್ಷಕ ಭಾಸ್ಕರ್, ಬಲರಾಮ್, ವಸಂತ್, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕುಮಾರಸ್ವಾಮಿ ಹಾಗೂ ಇತರರಿದ್ದರು.

# ಇಂದಿರಾ ಕ್ಯಾಂಟಿನ್ ಅನೈರ್ಮಲ್ಯ ತಹಸೀಲ್ದಾರ್ ತರಾಟೆ



ಬೇಲೂರು : ಪಟ್ಟಣದಲ್ಲಿರುವ ಇಂದಿರಾ ಕ್ಯಾಂಟಿನ್‌ಗೆ ತಹಸೀಲ್ದಾರ್ ಮಮತಾ ಅವರು ದಿಢೀರ್ ಭೇಟಿ ನೀಡಿ ಪರಿಶೀಲಿಸಿದರು.

ಸ್ವಚ್ಛತೆ, ಶುಚಿ, ರುಚಿಯ ಬಗ್ಗೆ ಪರಿಶೀಲನೆ ನಡೆಸಿ ಸರಿಯಾದ ನಿರ್ವಹಣೆ ಮಾಡದೆ ನಿರ್ಲಕ್ಷ್ಯ ತೋರಿರುವ ಟೆಂಡರ್‌ದಾರನ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಅವರು, ಬಡವರಿಗೆ ಕಡಿಮೆ ದರದಲ್ಲಿ ತಿಂಡಿ ಮತ್ತು ಊಟ ದೊರೆಯಬೇಕೆಂಬುದು ಸರ್ಕಾರದ ಆಶಯವೇ ಇಂದಿರಾ ಕ್ಯಾಟಿನ್. ಸ್ವಚ್ಛತೆ, ಶುಚಿ, ರುಚಿಯ ಸಾರ್ವಜನಿಕರ ಆರೋಪದ ಹಿನ್ನೆಲೆಯಲ್ಲಿ ಕ್ಯಾಂಟಿನ್‌ಗೆ ದಿಢೀರ್ ಭೇಟಿ ನೀಡಿ ಪರಿಶೀಲಿಸಲಾಗುತ್ತಿದೆ. ಪಟ್ಟಣದ ಇಂದಿರಾ ಕ್ಯಾಟಿನ್‌ನಲ್ಲಿ ಗುಣಮಟ್ಟದ ಆಹಾರ ಜೊತೆಗೆ ಸ್ವಚ್ಛತೆಗೆ ಕೂಡ ಕಾಣೆಯಾಗಿದೆ ಎಂದ ಅವರು, ಇಂದಿರಾ ಕ್ಯಾಂಟಿನ್‌ಗೆ ಭೇಟಿ ಕೊಟ್ಟಂತಹ ಸಮಯದಲ್ಲಿ ಗ್ರಾಹಕರನ್ನು ವಿಚಾರಿಸಿ ಅವರಿಂದ ಮಾಹಿತಿ ಪಡೆದುಕೊಂಡಿದ್ದೇನೆ. ಕೊಳೆತ ಸ್ಥಿತಿಯಲ್ಲಿ ತರಕಾರಿ ಪದಾರ್ಥಗಳು, ಕೈತೊಳೆಯುವ ತೊಟ್ಟಿಯಲ್ಲಿ ಸ್ವಚ್ಚತೆಯಿಲ್ಲ, ಪಾತ್ರೆಗಳನ್ನು ಸ್ವಚ್ಚತೆ ಮಾಡಿಲ್ಲ, ಒಟ್ಟಾರೆ ಕ್ಯಾಂಟೀನ್ ನಿರ್ವಾಹರಣೆ ಇಲ್ಲದೆ ಸಾರ್ವಜನಿಕರಿಗೆ ಗುಣಮಟ್ಟದ ಆಹಾರ ಸಿಗುತ್ತಿಲ್ಲ. ಸ್ವಚ್ಛತೆ ಹಾಗೂ ಗುಣಮಟ್ಟಕ್ಕೆ ಆದ್ಯತೆ ನೀಡುವಂತೆ ಸಿಬ್ಬಂದಿಗೆ ಸೂಚನೆ ನೀಡಿದ್ದೇನೆ ಎಂದರು.

# ಅಪ್ರೆಂಟಿಸ್ ತರಬೇತಿಗೆ 150 ಅಭ್ಯರ್ಥಿಗಳು ಆಯ್ಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಅರಕಲಗೂಡು: ಪಟ್ಟಣದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಆಯೋಜಿಸಿದ್ದ ಬೆಂಗಳೂರಿನ ಟೊಯೋಟಾ ಕಿರ್ಲೋಸ್ಕರ್ ಮೋಟಾರ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಅಪ್ರೆಂಟಿಸ್ ತರಬೇತಿಗೆ 150 ಐಟಿಐ ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆಂದು ಸಂಸ್ಥೆಯ ಉದ್ಯೋಗ ಮಾಹಿತಿ ಅಧಿಕಾರಿ ಎ.ಎಸ್. ಯೋಗನಾಥ್ ತಿಳಿಸಿದ್ದಾರೆ.

ಲಿಖಿತ ಪರೀಕ್ಷೆ ಮತ್ತು ಸಂದರ್ಶನಕ್ಕೆ ಹಾಜರಾಗಿದ್ದ 167 ಅಭ್ಯರ್ಥಿಗಳಲ್ಲಿ 17 ಅಭ್ಯರ್ಥಿಗಳು ಲಿಖಿತ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಅನರ್ಹಗೊಂಡು ಅಂತಿಮವಾಗಿ 150 ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಯಿತು. ಆಯ್ಕೆಯಾದವರಿಗೆ ವೈದ್ಯಕೀಯ ತಪಾಸಣೆ ಪರೀಕ್ಷೆ ನಡೆಸಿ ಆಗಸ್ಟ್ ಎರಡನೇ ವಾರದಲ್ಲಿ ತರಬೇತಿಗೆ ಹಾಜರಾಗಲು ಸೂಚಿಸಲಾಯಿತು. ಆಯ್ಕೆ ಪ್ರಕ್ರಿಯೆಯನ್ನು ಟೊಯೋಟಾ ಕಂಪನಿಯ ಮಾನವ ಸಂಪನ್ಮೂಲ ವಿಭಾಗದ ಅಧಿಕಾರಿಗಳಾದ ಅಭಿಷೇಕ್, ಪ್ರದೀಪ್, ಪ್ರಭಾಕರ್, ಚಂದು ಮತ್ತು ಇತರೆ ಅಧಿಕಾರಿಗಳು ನಡೆಸಿದರು.

ತಾಲ್ಲೂಕು ಕೇಂದ್ರಗಳಲ್ಲಿ ಪ್ರತಿ ವರ್ಷ ಈ ರೀತಿಯ ಕ್ಯಾಂಪಸ್ ಸಂದರ್ಶನವನ್ನು ನಡೆಸುವುದರಿಂದ ಐಟಿಐ ವಿದ್ಯಾರ್ಥಿಗಳಿಗೆ ಅಪ್ರೆಂಟಿಸ್ ತರಬೇತಿ ಪಡೆಯಲು ಅನುಕೂಲವಾಗುತ್ತದೆಂದು ಹಾಜರಿದ್ದ ಹಲವಾರು ವಿದ್ಯಾರ್ಥಿಗಳು ಸಂತಸ ವ್ಯಕ್ತಪಡಿಸಿದರು. ಜಿಲ್ಲೆಯ ವಿವಿಧ ತಾಲ್ಲೂಕುಗಳಿಂದ ಮತ್ತು ಪಕ್ಕದ ಜಿಲ್ಲೆಗಳಿಂದ ಐಟಿಐ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಮಕ್ಕಳಿಗೆ ಆರೋಗ್ಯವನ್ನೇ ಆಸ್ತಿಯಾಗಿಸಿ



**ಚೇತನ್ ಗುರೂಜಿ,**
**ಬಸವ ಯೋಗ ಕೇಂದ್ರ, ಅಡಗೂರು**

ಇಂದಿನ ನಮ್ಮ ತಂದೆ ತಾಯಂದಿರ ಮನೋಭಾವ ನೋಡಿದರೆ ಒಂದು ಕ್ಷಣ ಯೋಚಿಸುವಂತಹ ಸ್ಥಿತಿ ಬಂದಿದೆ. ಉತ್ತಮ ಶಾಲೆಯಲ್ಲಿ ಶಿಕ್ಷಣ ಕೊಡಿಸಬೇಕು ನಂತರ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಡಾಕ್ಟರ್ ಅಥವಾ ಎಂಜಿನೀಯರ್ ಓದಿಸಿ ಅವರಿಗೊಂದು ಕೆಲಸ ಕೊಡಿಸಿದರೆ ನಮ್ಮ ಜವಾಬ್ದಾರಿ ಮುಗಿಯುತ್ತದೆ ಎಂಬ ಯೋಚನೆ ಪಾಲರದ್ದಾಗಿದೆ. ಇದಲ್ಲದೆ ಮಧ್ಯಮ ಕುಟುಂಬದವರು ಸಹ ಹಿಂದೆ ಬಿದ್ದಿಲ್ಲ ಪಕ್ಕದ ಮನೆಯವರು ಅಂತಹ ಶಾಲೆಗೆ ಕಳಿಸುತ್ತಿದ್ದಾರೆ ನಾನು ಸಹ ಸಾಲ ಮಾಡಿಯಾದರು ಆ ಶಾಲೆಯಲ್ಲಿ ಓದಿಸಬೇಕೆಂದು ಹಠಕ್ಕೆ ಬಿದ್ದು ಅವರು ಸಹ ಅಲ್ಪಸ್ವಲ್ಪ ಕೂಡಿಟ್ಟ ಹಣವನ್ನು ಮಕ್ಕಳ ವಿದ್ಯಾಭ್ಯಾಸಕ್ಕೆ ಖರ್ಚು ಮಾಡುತ್ತಿದ್ದಾರೆ. ಒಟ್ಟಿನಲ್ಲಿ ನಮ್ಮ ಗುರಿ ಏನೆಂದರೆ ಅವನು ಓದಿ ಯಾವುದಾದರೊಂದು ಕೆಲಸಕ್ಕೆ ಸೇರಿಕೊಂಡರೆ ಸಾಕು ಎಂಬ ಆಸೆಯನ್ನು ಇಟ್ಟುಕೊಂಡಿದ್ದಾರೆ.

## ಆರೋಗ್ಯಕ್ಕೆ ಆದ್ಯತೆ ನೀಡಿ

ಮಕ್ಕಳನ್ನು ನಾವೆಷ್ಟು ಬಲಿಷ್ಠವಾಗಿ ಮತ್ತು ಆರೋಗ್ಯವಂತರನ್ನಾಗಿ ಮಾಡುತ್ತಿದ್ದೇವೆ ಎಂಬುದನ್ನು ಮರೆತಿದ್ದೇವೆ. ಇತ್ತೀಚೆಗಂತೂ ಹಳ್ಳಿಗರ ಜನರು ಸಹ ನಗರದ ಶಾಲೆಗಳಿಗೆ ಕಳುಹಿಸಲು ಬಸ್ಸಿನ ವ್ಯವಸ್ಥೆ ಇರುವುದಕ್ಕೋಸ್ಕರ ದೂರ ಹೋಗಬೇಕಾಗಿರುವುದರಿಂದ ಮಕ್ಕಳನ್ನು ಬೇಗ ಎಬ್ಬಿಸಿ ಸಂಪೂರ್ಣ ನಿದ್ದೆ ಮಾಡಲು ಬಿಡದೆ ಅವಸರದ ಸ್ನಾನ ಮಾಡಿಸಿ ಶಾಲಾ ಬಸ್ ಬರುವ ಸಮಯ ಆಗುತ್ತದೆಂದು ಬೇಗ ಬೆಳಗಿನ ಉಪಹಾರವನ್ನು ಮಕ್ಕಳು ತಿನ್ನಲಿಕ್ಕೆ ಆಗದೆ ಇದ್ದರೂ ಒತ್ತಾಯಪೂರ್ವಕವಾಗಿ ಬಾಯಿಗೆ ನೂಕಿ ನಂತರ ಅದನ್ನೇ ಮಧ್ಯಾಹ್ನದ ಊಟಕ್ಕೆ ಡಬ್ಬಿಗೆ ತುಂಬಿ ಕಳಿಸಿದರೆ ನಮ್ಮ ಕೆಲಸ ಮುಗಿಯಿತು. ಇನ್ನೆಲ್ಲಾ ಜವಾಬ್ದಾರಿ ಶಾಲೆಯವರದು, ಸಂಜೆ ಬಂದಾಗ ಆಟ ಆಡುವುದಕ್ಕೂ ಬಿಡದೆ ಅಜ್ಜ ಅಜ್ಜಿಯವರ ಹತ್ತಿರ ಕುಳಿತು ಮಾತನಾಡುವುದಕ್ಕೂ ಅವಕಾಶ ಕೊಡದೆ ಶಾಲಾ ಹೋಂ ವರ್ಕ್ ಬರೆಯಲು ಕೂರಿಸುವುದು. ಆ ನಂತರ ಊಟ ಮಾಡಿಸಿ ಮಲಗಿಸಿದರೆ ಆ ದಿನದ ಜವಾಬ್ದಾರಿ ಅಲ್ಲಿಗೆ ಕಳೆದು ಹೋಗುತ್ತದೆ ಎಂಬ ವಾತಾವರಣವನ್ನು ನಿರ್ಮಾಣ ಮಾಡಿಕೊಂಡಿದ್ದೇವೆ. ಕಾರಣ ನಮಗೂ ಸಮಯವಿಲ್ಲ ಏಕೆಂದರೆ ಮಕ್ಕಳನ್ನು ಒಳ್ಳೆಯ ಶಾಲೆಗೆ ಕಳಿಸಿದ ಮೇಲೆ ಶುಲ್ಕ ಕಟ್ಟಲು ದುಡಿಯಬೇಕು ಹಾಗೆ ಮಕ್ಕಳಿಗಾಗಿ ಒಂದಿಷ್ಟು ಮುಂದೆ ಆಸ್ತಿ ಮಾಡಬೇಕು ಎಂಬ ಓಟದಲ್ಲಿ ಮಕ್ಕಳನ್ನು ಯಾವ ರೀತಿ ಬೆಳೆಸುತ್ತಿದ್ದೇವೆ ಎಂಬ ಯೋಚನೆಯನ್ನು ಸಹ ನಾವು ಮಾಡುತ್ತಿಲ್ಲ.

## ಮಕ್ಕಳಿಗೆ ಒತ್ತಡ ಸರಿಯಲ್ಲ

ಒಳ್ಳೆಯ ವಿದ್ಯಾಭ್ಯಾಸ ಕೊಡಿಸಿದ್ದೇನೆ ಬೇಕಾದಷ್ಟು ಹಣ ಸಂಪಾದಿಸಿದ್ದೇನೆ ಇನ್ನೇನು ಮಾಡಬೇಕು ನನ್ನ ಕರ್ತವ್ಯ ಮುಗಿಯುತ್ತದೆ ಎಂಬ ಮನಸ್ಥಿತಿ ಪೋಷಕರದ್ದು. ಇಷ್ಟೇ ಜೀವನವಾಗಿದ್ದರೆ ಇಷ್ಟೊಂದು ಪೀಠಿಕೆ ಬರೆಯುವ ಅಗತ್ಯವಿರಲಿಲ್ಲ. ಮಕ್ಕಳು ಓದಿ ಅಂಕ ಗಳಿಸುವುದೇ ಉದ್ದೇಶವಲ್ಲ. ಆ ಹಿನ್ನೆಲೆಯಲ್ಲಿ ಅವರ ಮೇಲೆ ವಿಪರೀತ ಒತ್ತಡ ಹಾಕಬೇಡಿ. ಇತ್ತೀಚಿನ ಮಕ್ಕಳಲ್ಲಿ ಅನಾರೋಗ್ಯದ ತೊಂದರೆಗಳು ಜಾಸ್ತಿ ಆಗುತ್ತಿವೆ. ಅದರಲ್ಲೂ ಹೃದಯಾಘಾತ ಎಂಬುದು ಚಿಕ್ಕ ವಯಸ್ಸಿನ ಮಕ್ಕಳಲ್ಲಿ ಆಗುತ್ತಿರುವುದನ್ನು ನೋಡಿ ನಾವುಗಳು ಯಾವ ಕಡೆ ಸಾಗುತ್ತಿದ್ದೇವೆ ಎಂಬುದೇ ಅರ್ಥವಾಗುತ್ತಿಲ್ಲ. ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಿದರಷ್ಟೇ ಸಾಲದು. ಅದಕ್ಕಿಂತಲೂ ಬೆಲೆಯುಳ್ಳದ್ದು ಎಂದರೆ ಸದೃಢ ಮತ್ತು ಸುಸಂಸ್ಕೃತರಾಗಿ ಬೆಳೆಸಿದರೆ ಅದೇ ದೊಡ್ಡ ಆಸ್ತಿ.

ಮನೆಯೇ ಮೊದಲ ಪಾಠಶಾಲೆ ಅಲ್ಲಿಂದಲೇ ಎಲ್ಲವೂ ಶುರುವಾಗುವುದರಿಂದ ನಾವು ಏನು ಮಾಡುತ್ತೇವೋ ಅದನ್ನೇ ಮಕ್ಕಳು ಕಲಿಯುತ್ತಾರೆ. ಹಾಗಾಗಿ ಗುಣಮಟ್ಟದ ಆಹಾರವನ್ನು ಮನೆಯಲ್ಲೇ ಮಾಡುವ ವ್ಯವಸ್ಥೆ ಮಾಡಿಕೊಳ್ಳಬೇಕು. ಅಲ್ಲದೆ ನಾವು ತಿನ್ನುವುದು ಮತ್ತು ಮಕ್ಕಳಿಗೂ ತಿನ್ನಿಸುವ ಅಭ್ಯಾಸ ಬೆಳೆಸಬೇಕು ಅದು ನಮ್ಮೆಲ್ಲರ ಹೊಣೆ.

ನಾವೇ ದಾರಿ ತಪ್ಪಿದರೆ ಮಕ್ಕಳು ಏನಾಗುತ್ತಾರೆ ಯೋಚನೆ ಮಾಡಿ. ಯಾಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಹುಟ್ಟಿದ ಮಕ್ಕಳಿಗೆ ಬಿಸ್ಕತ್ತು, ಚಾಕ್ಲೇಟ್, ಬೇಕರಿ ತಿನಿಸು, ಪಾನಿಪುರಿ, ಗೋಬಿ ಹೀಗೆ ಇನ್ನು ಹಲವು ಬಗೆಯ ತಿನಿಸುಗಳು ಗೊತ್ತಿರುವುದಿಲ್ಲ. ಮನೆಯಲ್ಲಿದ್ದ ನಾವು ತಿನ್ನುವುದನ್ನು ನೋಡಿ ಅವರು ತಿನ್ನಲಿಕ್ಕೆ ಶುರು ಮಾಡಿದ್ದು ಹಾಗಾದರೆ ತಪ್ಪು ಯಾರದ್ದು ಯೋಚಿಸಿ. ಮಗುವಿನ ಆಯಸ್ಸು



ಹೆಚ್ಚಲಿ ಜೀವನಪೂರ್ತಿ ಸಂತೋಷದಿಂದ ಇರಲಿ ಎಂದು ಹುಟ್ಟಿದ ಹಬ್ಬಕ್ಕೆ ಕೇಕ್ ತಿನ್ನಿಸುತ್ತೇವೆ. ಅವರ ಜೊತೆ ನಾವು ತಿನ್ನುತ್ತೇವೆ. ಅದನ್ನು ತಿಂದ ಮೇಲೆ ಯಾರಾದರೂ ಬಹಳಷ್ಟು ವರ್ಷ ಬದುಕಲು ಸಾಧ್ಯವಿದೆಯೇ ಖಂಡಿತ ಇಲ್ಲ. ಬೇಗ ಕಾಯಿಲೆಗಳು ಬಂದು ಸಾಯುತ್ತೇವೆ. ಇನ್ನು ನಾಲಿಗೆ ರುಚಿಗಾಗಿ ಇವತ್ತಿನ ಯುವ ಜನತೆ ತಿನ್ನುತ್ತಿರುವ ಆಹಾರ ನೋಡಿದರೆ ಭಯವಾಗುತ್ತದೆ. ಹೀಗಾದರೆ ಇವರು ಮುಂದಿನ ಭವಿಷ್ಯದ ಪ್ರಜೆಗಳಾಗುತ್ತಾರೋ ಅಥವಾ ರೋಗಿಗಳಾಗುತ್ತಾರೋ ಗೊತ್ತಾಗುತ್ತಿಲ್ಲ. ಅಷ್ಟರ ಮಟ್ಟಿಗೆ ನಮ್ಮ ಜೀವನಶೈಲಿ ಕೆಡಿಸಿಕೊಳ್ಳುತ್ತಿದ್ದೇವೆ. ಅದರಲ್ಲೂ ಮಕ್ಕಳಿಗೆ ಕೊಡುತ್ತಿರುವ ತಿಂಡಿ ತಿನಿಸುಗಳನ್ನು ನೋಡಿದರೆ ಭಯವಾಗುತ್ತದೆ. ಬೆಳಗ್ಗೆ ಎದ್ದ ತಕ್ಷಣ ಕೊಡುವಂತಹ ಬ್ರೆಡ್ ಬಿಸ್ಕತ್ತು ನಂತರ ಮಕ್ಕಳು ಹಠ ಮಾಡುತ್ತವೆ ಎಂದು ಜಂಕ್ ಫುಡ್‌ಗಳು ತಿನ್ನಿಸುತ್ತಿರುವುದು ಹೆಚ್ಚಾಗಿರುವುದರಿಂದಲೇ ಬೊಜ್ಜು, ಅಸ್ತಮಾ, ಹೃದಯ ಸಂಬಂಧಿ ಕಾಯಿಲೆಗಳು ದಿನೇ ದಿನೇ ಹೆಚ್ಚಾಗುತ್ತಾ ಹೋಗುತ್ತದೆ ಹೊರತು ಕಡಿಮೆ ಆಗುತ್ತಿಲ್ಲ. ಹಾಗಾದರೆ ಇಂತಹ ಕಾಯಿಲೆಗಳು ಬರದಂತೆ ತಪ್ಪಿಸಿಕೊಳ್ಳಲು ಬೆಳಿಗ್ಗೆ ಬೇಗ ಏಳುವುದು ನಂತರದಲ್ಲಿ ಪೂಜೆ ಪ್ರಾರ್ಥನೆಯನ್ನು ಸಹ ಕಡ್ಡಾಯವಾಗಿ ದಿನನಿತ್ಯ ಮಾಡಿಸಲೇಬೇಕು. ಇನ್ನು ಶಾಲೆಗಳಲ್ಲೂ ಒಂದು ತರಗತಿಯನ್ನು ಆರೋಗ್ಯಕ್ಕೆ ಸಂಬಂಧಪಟ್ಟಂತೆ ದಿನನಿತ್ಯ ಮೀಸಲಿಟ್ಟರೆ ಇನ್ನೂ ಒಳ್ಳೆಯದು. ಅದರ ಜೊತೆಗೆ ಹಣ್ಣು ತರಕಾರಿಗಳನ್ನು ಮಕ್ಕಳಿಗೆ ಹೆಚ್ಚು ತಿನಿಸುವ ಅಭ್ಯಾಸ ಮಾಡುವುದು ಒಳಿತು. ಅಲ್ಲದೆ ಸಂಜೆಯ ಸಮಯದಲ್ಲಿ ಆಟಗಳನ್ನು ಆಡಲು ಬಿಡಬೇಕು ಮತ್ತು ಪೋಷಕರು ಮಕ್ಕಳ ಜೊತೆಗೆ ದಿನಕ್ಕೆ ಕೆಲವು ಸಮಯ ಮಾತನಾಡುವ ಅಭ್ಯಾಸವನ್ನು ಬೆಳೆಸಿಕೊಳ್ಳಬೇಕು. ಓದುವುದೇ ಜೀವನವಾಗಬಾರದು ಮತ್ತು ಮಕ್ಕಳ ಮೇಲೆ ಬಹಳ ಒತ್ತಡ ಹಾಕದೆ ನಿಮ್ಮ ಜೊತೆ ನಾವಿದ್ದೇವೆ ಹೆದರದೆ ನೀನು ಮುನ್ನುಗ್ಗಲು ಪ್ರಯತ್ನಿಸು ಎಂದು ಹುರಿದುಂಬಿಸಬೇಕು.

ಎಷ್ಟೇ ಆರೋಗ್ಯದ ಬಗ್ಗೆ ತಿಳುವಳಿಕೆಗಳನ್ನು ಹೇಳಿದರೂ ಮಕ್ಕಳು ಕೇಳುತ್ತಿಲ್ಲ ಎಂದು ಪೋಷಕರು ಸಹ ಆಗಾಗ ಹೇಳುತ್ತಿರುತ್ತಾರೆ. ಒಂದು ಕೆಲಸವನ್ನು ನಾವು ಮಾಡಬೇಕು ಒಂದು ಸಾರಿ ಅವರನ್ನು ಡಯಾಲಿಸಿಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಆಗ ಗೊತ್ತಾಗುತ್ತದೆ ನಮ್ಮ ಲಿವರ್ ಎಷ್ಟು ಮಹತ್ವದ್ದು ಎಂದು ತಿಳಿಯುತ್ತದೆ. ಅದೇ ರೀತಿ ಹೃದಯ ಕಾಯಿಲೆ ತೊಂದರೆಯನ್ನು ಅನುಭವಿಸುತ್ತಿರುವ ಜೊತೆ ಒಂದು ಸಾರಿ ಮಾತನಾಡಿಸಿ ಆಗಲಾದರೂ ನಮ್ಮ ಹೃದಯದ ಮಹತ್ವ ಎಂತಹದ್ದು ಎಂದು ತಿಳಿಯುತ್ತದೆ. ಇದರಿಂದ ಏನಾದರೂ ಪಾಠ ಕಲಿತು ಬದಲಾವಣೆ ಮಾಡಿಕೊಂಡರೆ ಒಳಿತು ಇಲ್ಲವಾದರೆ ಮುಂದಿನ ದಿನಗಳಲ್ಲಿ ಬಹಳ ಕಷ್ಟಗಳನ್ನು ಎದುರಿಸುವ ಪರಿಸ್ಥಿತಿ ಬರುವ ಸಾಧ್ಯತೆಯು ಹೆಚ್ಚು. ಅದರಲ್ಲೂ ಭಾರತದಲ್ಲಿ ಯುವಜನತೆ ಹೆಚ್ಚು ಹೃದಯಘಾತದಿಂದ ಸಾವನಪ್ಪುತ್ತಿದ್ದಾರೆ ಎಂಬ ವರದಿ ಸಹ ಇತ್ತೀಚೆಗೆ ಬರುತ್ತಿದೆ.

ಕಾರಣ ಯುವಜನರಲ್ಲಿ ದೈಹಿಕ ಶ್ರಮ ಕಡಿಮೆಯಾಗುತ್ತಿದೆ ಮತ್ತು ಆಹಾರ ಕ್ರಮ ಬಹಳಷ್ಟು ಬದಲಾವಣೆ ಮಾಡಿಕೊಂಡಿರುವುದು ಮತ್ತು ಮಕ್ಕಳ ಮೇಲೆ ಓದಬೇಕು ಎಂಬ ಒತ್ತಡವು ಸಹ ಹೆಚ್ಚಾಗುತ್ತಿದೆ ಎಂಬ ವರದಿ ಇದೆ. ಇದರಿಂದ ಕಣ್ಣೆದುರಿಗೆ ಮಕ್ಕಳನ್ನು ಶಕ್ತಿ ಹೀನರನ್ನಾಗಿ ನಾವೇ ಮಾಡುತಿದ್ದೇವೆ ಎಂದನಿಸುತ್ತಿದೆ. ಇನ್ನೊಂದು ಕಾರಣ ಪೋಷಕರ ಮನೋಭಾವನೆ ಎಷ್ಟು ಬದಲಾಗಿದೆ ಎಂದರೆ ಅವರು ತಮ್ಮ ಮಗನ ಬಗ್ಗೆ ಹೇಳುತ್ತಿರುತ್ತಾರೆ. ಎಷ್ಟು ಚುರುಕಿದ್ದಾನೆ ಎಂದರೆ ಎಲ್ಲಾ ಪರೀಕ್ಷೆಗಳಲ್ಲೂ ರಾಂಕ್ ಬಂದಿದ್ದಾನೆ ಜೊತೆಗೆ ಕಂಪ್ಯೂಟರ್‌ನ ಎಲ್ಲಾ ಸಿಸ್ಟಮ್‌ಗಳು ಗೊತ್ತು ಅಲ್ಲದೆ ಮೊಬೈಲ್ ಆಪರೇಟರ್ ಬಹಳ ಚೆನ್ನಾಗಿ ಮಾಡುತ್ತಾನೆ. ಹೀಗೆ ಅವನ ಮೆದುಳಿನ ಬುದ್ಧಿವಂತಿಕೆ ಬಗ್ಗೆ ಮಾತನಾಡುತ್ತೇವೆ ಹೊರತು ಅವನಿಗೆ ನಿನ್ನ ಜವಾಬ್ದಾರಿ ಏನಿದೆ. ಏನನ್ನು ನೀನು ಮಾಡಬೇಕು ಹಾಗೆ ಮುಂದಿನ ಗುರಿಯೇನು? ಉತ್ತಮ ವ್ಯಕ್ತಿಯಾಗಿ ಬೆಳೆಯಬೇಕಾದರೆ ವಿನಯತೆ ಹಿರಿಯರ ಬಗ್ಗೆ ಗೌರವ ಮತ್ತು ಪೋಷಕರ ಕಷ್ಟ ಸುಖಗಳ ಪರಿಚಯ ತಿಳಿಸುತ್ತಾ ಬೆಳೆಸಿದ್ದೇವಾ ಎಂದು ಯೋಚಿಸುವುದೇ ಇಲ್ಲ.

ಬೈದು ಬುದ್ಧಿ ಹೇಳುವವರು ನಿನ್ನ ಒಳ್ಳೆಯದಕ್ಕೆ ಎಂಬ ಸತ್ಯವನ್ನು ಅರ್ಥ ಮಾಡಿಸಬೇಕು. ತಂದೆ ಅಥವಾ ತಾಯಿ ಒಬ್ಬರ ಹೆದರಿಕೆ ಮಕ್ಕಳ ಮೇಲೆ ಇದ್ದರೆ ಅವರನ್ನು ಸರಿದಾರಿಗೆ ತರಲು ಸಹಾಯವಾಗುತ್ತದೆ. ಸಕಲ ಸವಲತ್ತುಗಳನ್ನು ಕೊಟ್ಟು ನನ್ನ ಅನುಭವಿಸಿದ ಕಷ್ಟ ಮಕ್ಕಳಿಗೆ ಬರಬಾರದೆಂದು ಬೆಳೆಸಿದ್ದೆ. ಆದರೆ ಅವರಿಂದ ಉತ್ತಮ ಸಾಧನೆಯನ್ನು ನಿರೀಕ್ಷೆ ಮಾಡುವುದು ತುಂಬಾ ಕಷ್ಟವಾದೀತು. ಸಾಧಿಸಿದ ಅನೇಕ ಜನರ ಜೀವನ ಚರಿತ್ರೆಯನ್ನು ಓದಿದಾಗ ಗೊತ್ತಾಗುವುದೇನೆಂದರೆ ಅವರು ಕಷ್ಟದ ಜೀವನದಲ್ಲೇ ಬೆಂದು ಬಂದ ಮಕ್ಕಳೇ ಮುಂದೆ ಉತ್ತಮ ಸಾಧನೆಗೆ ಏರಿರುವುದು ತಿಳಿಯುತ್ತದೆ. ಇವತ್ತಿನ ಮಕ್ಕಳ ಬುದ್ಧಿವಂತಿಕೆ ನೋಡಿದರೆ ಓದುವುದರಲ್ಲಿ ಮುಂದಿದ್ದಾರೆ ಆರೋಗ್ಯದಲ್ಲಿ ಹಿಂದೆ



ಬೀಳುತ್ತಿದ್ದಾರೆ ಎಚ್ಚರಿಕೆ ವಹಿಸಿದರೆ ಮಾತ್ರವೇ ಅವರ ಯಶಸ್ಸಿನ ಶಿಖರವನ್ನು ಕೊನೆಯವರೆಗೂ ತಲುಪಲು ಸಾಧ್ಯವಾಗುವುದಕ್ಕೆ ಆರೋಗ್ಯವೇ ಭದ್ರ ಬುನಾದಿ ಎಂಬ ಮಾತುಗಳನ್ನು ಸದಾ ಅವರ ನೆನಪಿಗೆ ತರುತ್ತಿರಬೇಕು. ಇಲ್ಲದಿದ್ದರೆ ಆಗುವ ಅನಾಹುತಗಳಿಗೆ ನಾವೇ ಜವಾಬ್ದಾರರಾಗುತ್ತೇವೆ. ಇತ್ತೀಚೆಗೆ ಹೈದರಾಬಾದ್‌ನಲ್ಲಿ ಒಂದು ನಡೆದ ಘಟನೆ ಎಸ್‌ಎಸ್‌ಎಲ್‌ಸಿ, ಪಿಯುಸಿ, ಮತ್ತು ಎಂಜಿನೀಯರಿಂಗ್ ಅಲ್ಲದೇ ಐಐಟಿಯಲ್ಲೋ ಉತ್ತಮ ಅಂಕ ಪಡೆದು ಸೌದಿ ಅರೇಬಿಯಾದಲ್ಲಿ ಸಕಲ ಸೌಕರ್ಯಗಳ ವ್ಯವಸ್ಥೆ ಮಾಡಿ ವರ್ಷಕ್ಕೆ ಒಂದು ಕೋಟಿ ಸಂಬಳ ಕೊಡುತ್ತೇವೆಂದು ಒಂದು ಕಂಪನಿ ಇವನಿಗೆ ತಿಳಿಸುತ್ತದೆ. ಹೊರಡಲು 15 ದಿನ ಬಾಕಿ ಇರುವಾಗಲೇ ಹೃದಯಘಾತಕ್ಕೆ ತುತ್ತಾಗುತ್ತಾನೆ.

ಯಾಕೆ ಇಂತಹ ಒಬ್ಬ ಯುವಕ 25 ವರ್ಷಕ್ಕೆ ತೀರಿಕೊಂಡ ಏನು ಕಾರಣ ಎಂದು ತಿಳಿದುಕೊಳ್ಳಲು ಸರ್ಕಾರವೇ ಮುತುವರ್ಜಿ ವಹಿಸಿ ದೇಹದ ವೈದ್ಯಕೀಯ ಪರೀಕ್ಷೆ ಮಾಡಿಸಿದಾಗ ತಿಳಿದು ಬಂದ ಬಂದ ವರದಿ ಏನೆಂದರೆ ಅತಿಯಾಗಿ ತಿನ್ನುತ್ತಿದ್ದ ಬೇಕರಿ ಪದಾರ್ಥಗಳು ಮತ್ತು ಜಂಕ್ ಫುಡ್ಡುಗಳೇ. ಅದರಲ್ಲೂ ಎಣ್ಣೆಯಿಂದ ಕರಿದ ಪದಾರ್ಥಗಳ ಸೇವನೆ ಇವನ ಹೃದಯಘಾತಕ್ಕೆ ಕಾರಣವೆಂದು ಮಾಹಿತಿಯನ್ನು ವೈದ್ಯರು ಕೊಡುತ್ತಾರೆ. ಇಂತಹ ಘಟನೆಗಳು ಪ್ರತಿನಿತ್ಯ ನಡೆಯುತ್ತಿದ್ದರು. ನಿರ್ಲಕ್ಷ್ಯ ವಹಿಸುತ್ತಿದ್ದೇವೆ ಎಂದರೆ ಏನನ್ನಬೇಕು ತಿಳಿಯುತ್ತಿಲ್ಲ. ಕೊನೆಗೆ ಒಂದು ಸಣ್ಣಕಥೆ ನೋಡೋಣ. ತಂದೆ ತಾಯಿಗೆ ಒಬ್ಬನೇ ಮಗನಿದ್ದ ಅವನು ಓದಿನಲ್ಲಿ ತುಂಬಾ ಮುಂದು ಜೊತೆಗೆ ಶಾಲೆಯ ಆಟಗಳಲ್ಲಿ ಚುರುಕಾಗಿದ್ದ ಮನೆಯ ಎಲ್ಲಾ ಕೆಲಸಗಳಲ್ಲಿ ತೊಡಗಿಕೊಳ್ಳುತ್ತಿದ್ದ. ಆದರೂ ತಂದೆ ಮಾತ್ರ ಮಗನನ್ನು ದಿನನಿತ್ಯ ಬಯ್ಯುವುದು ತಪ್ಪುತ್ತಿರಲಿಲ್ಲ. ಒಂದು ದಿನ ಮಗನಿಗೆ ಎಷ್ಟು ಕೋಪ ಬಂತು ಎಂದರೆ ತನ್ನ ತಂದೆಯನ್ನು ಕೊಂದೇ ಬಿಡಬೇಕು ಎಂದೆನಿಸಿತು. ದಿನನಿತ್ಯ ತಂದೆ ಮಧ್ಯಾಹ್ನದ ಊಟಕ್ಕೆ ಮನೆಗೆ ಕೆಲಸ ಮುಗಿಸಿಕೊಂಡು ಬರುತ್ತಿದ್ದರು ಒಂದು ದಿನ ಅವನಿಗೆ ಯೋಚನೆ ಬಂತು. ಮನೆಯ ಮೇಲಿಂದ ಅವರ ತಲೆಯ ಮೇಲೆ ಕಲ್ಲನ್ನು ಹಾಕಬೇಕೆಂದು ಅಂದುಕೊಂಡು ಮೇಲೆ ಕುಳಿತಿದ್ದ ಹೊರಗಿನಿಂದ ಗಂಡ ಕೆಲಸ ಮುಗಿಸಿಕೊಂಡು ಕೈ ಕಾಲು ಮುಖ ತೊಳೆದು ಊಟಕ್ಕೆ ಕೂತಾಗ ಹೆಂಡತಿ ಕೇಳುತ್ತಾಳೆ. ಮಗ ಅಷ್ಟು ಒಳ್ಳೆಯವನು ಇದ್ದರೂ ನೀವು ಅವನನ್ನು ದಿನನಿತ್ಯ ಬೈಯುತ್ತಿರಲ್ಲ ಏಕೆ ಎಂದು ಕೇಳುತ್ತಾಳೆ. ತಂದೆಯ ಉತ್ತರ ನನಗೂ ಗೊತ್ತು, ನನ್ನ ಮಗ ಬಹಳ ಸಭ್ಯವಂತ ಎಂದು ಆದರೆ ಮತ್ತೆ ಬಯ್ಯುವುದೇಕೆ? ಅವನು ಕೆಡಬಾರದು ಇನ್ನೂ ಚೆನ್ನಾಗಿ ಯಶಸ್ಸು ಸಾಧಿಸಲಿ ಎಂಬ ಒಂದೇ ಕಾರಣ ಅಷ್ಟೇ ಎಂದು ಹೇಳಿದಾಗ ಮೇಲೆ ಕುಳಿತಿದ್ದ ಮಗನಿಗೆ ಎಂತಹ ತಪ್ಪು ಮಾಡುತ್ತಿದ್ದೆ ಎಂದು ಅರಿವಾಯಿತು. ಅರ್ಥ ಬಯ್ಯುವವರು ಬದುಕುವುದಕ್ಕೆ ಹೇಳುತ್ತಾರೆ ಎಂಬ ಗಾದೆ ಮಾತು ಸತ್ಯವಲ್ಲವೇ. ಏನಂತೀರಾ?

# ಇತಿಹಾಸದಲ್ಲಿ ಈ ದಿನ

## ಮೇ -30

**1987:** ಗೋವಾ ಕೇಂದ್ರಾಡಳಿತ ಪ್ರದೇಶದಿಂದ ಪ್ರತ್ಯೇಕವಾಗಿ ಭಾರತದ 25ನೇ ರಾಜ್ಯವಾಗಿ ಘೋಷಿಸಲಾಯಿತು. ಈ ದಿನವನ್ನು ಪ್ರತಿವರ್ಷ ಟಗೋವಾ ರಾಜ್ಯೋತ್ಸವ ದಿನಟವಾಗಿ ಆಚರಿಸಲಾಗುತ್ತದೆ.

**1826:** ಪಂಡಿತ ಜುಗಲ್ ಕಿಶೋರ್ ಶುಕ್ಲಾ ಅವರು ಕೋಲ್ಕತ್ತಾದಲ್ಲಿ ಮೊದಲ ಹಿಂದಿ ವಾರಪತ್ರಿಕೆ 'ಉದಂತ ಮಾರ್ತಂಡ' ಅನ್ನು ಪ್ರಾರಂಭಿಸಿದರು. ಈ ದಿನವನ್ನು 'ಹಿಂದಿ ಪತ್ರಿಕೋದ್ಯಮ ದಿನ'ವಾಗಿ ಆಚರಿಸಲಾಗುತ್ತದೆ.

**1919:** ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡದ ವಿರುದ್ಧವಾಗಿ ಪ್ರತಿಭಟನೆಯಾಗಿ, ನೊಬೆಲ್ ಪ್ರಶಸ್ತಿ ವಿಜೇತ ರವೀಂದ್ರನಾಥ ಟಾಗೋರ್ ಬ್ರಿಟಿಷ್ ಸರ್ಕಾರ ನೀಡಿದ ನೈಟ್‌ಹುಡ್ ಪದವಿಯನ್ನು ತ್ಯಜಿಸಿದರು.

**1606:** ಸಿಖ್ ಧರ್ಮದ ಐದನೇ ಗುರು ಅರ್ಜುನ್ ದೇವ್ ಅವರನ್ನು ಮುಘಲ್ ಸಾಮ್ರಾಟ್ ಜಹಾಂಗೀರ್ ಅವರ ಆದೇಶದಂತೆ ಹತ್ಯೆಗೊಳಿಸಲಾಯಿತು.

**2012:** ಭಾರತದ ಗ್ರ್ಯಾಂಡ್‌ಮಾಸ್ಟರ್ ವಿಶ್ವನಾಥನ್ ಆನಂದ್ ಅವರು ಇಸ್ರೇಲ್‌ನ ಬೋರಿಸ್ ಗೆಲ್ಫಾಂಡ್ ಅವರನ್ನು ಸೋಲಿಸಿ ತಮ್ಮ ಐದನೇ ವಿಶ್ವ ಚೆಸ್ ಚಾಂಪಿಯನ್ ಶಿಪ್ ಪ್ರಶಸ್ತಿಯನ್ನು ಗೆದ್ದರು.

**1952:** ಎಂ.ಎ. ಅಯ್ಯಂಗಾರ್ ಅವರು ಭಾರತದ ಮೊದಲ ಉಪಸಭಾಪತಿಯಾಗಿ ನೇಮಕಗೊಂಡರು.

**1510:** ಪೋರ್ಚುಗೀಸ್‌ರು ಗೋವಾವನ್ನು ಇಸ್ಮಾಯಿಲ್ ಆದಿಲ್ ಶಾ ಅವರ ನಿಯಂತ್ರಣಕ್ಕೆ ತಿರುಗಿಸಿದರು. ಆದರೆ ಇದೇ ವರ್ಷ ಡಿಸೆಂಬರ್‌ನಲ್ಲಿ ಅವರು ಮತ್ತೆ ಗೋವಾವನ್ನು ವಶಪಡಿಸಿಕೊಂಡರು.

ಜನನ

**1950:** ಪಾರೆಶ್ ರಾವಲ್, ಹಿಂದಿ ಚಿತ್ರರಂಗದ ಪ್ರಸಿದ್ಧ ನಟ ಮತ್ತು ರಾಜಕಾರಣಿ. ಅವರು ವೈವಿಧ್ಯಮಯ ಪಾತ್ರಗಳಿಂದ ಪ್ರಸಿದ್ಧರಾಗಿದ್ದಾರೆ.

**1983:** ಕೃಷ್ಣ ಅಭಿಷೇಕ್, ಭಾರತೀಯ ಹಾಸ್ಯನಟ ಮತ್ತು ಟಿವಿ ನಿರೂಪಕ.

**1985:** ಕೀರ್ತಿ ಕುಲಹಾರಿ, ಹಿಂದಿ ಚಲನಚಿತ್ರ ಮತ್ತು ವೆಬ್‌ಸೀರೀಸ್‌ಗಳಲ್ಲಿ ನಟನೆಯ ಮೂಲಕ ಖ್ಯಾತಿ ಪಡೆದ ನಟಿ.

**1985:** ಜೆನ್ನಿಫರ್ ವಿಂಗೆಟ್, ಭಾರತೀಯ ಟಿವಿ ಮತ್ತು ಚಲನಚಿತ್ರ ನಟಿ.

**1961:** ವಿ. ರವಿಚಂದ್ರನ್, ಕನ್ನಡ ಚಿತ್ರರಂಗದ ಪ್ರಸಿದ್ಧ ನಟ, ನಿರ್ದೇಶಕ ಮತ್ತು ಸಂಗೀತ ನಿರ್ದೇಶಕ. ಅವರು ಕ್ರೇಜಿ ಸ್ಟಾರ್ ಎಂದೇ ಪ್ರಸಿದ್ಧರಾಗಿದ್ದಾರೆ.

ನಿಧನ

**1606:** ಗುರು ಅರ್ಜನ್ ದೇವ್, ಸಿಖ್ ಧರ್ಮದ ಐದನೇ ಗುರು. ಅವರು ಮುಘಲ್ ಸಾಮ್ರಾಟ್ ಜಹಾಂಗೀರ್ ಅವರ ಆದೇಶದಂತೆ ಶಹೀದಿಯಾಗಿದ್ದರು.

**1955:** ನಾರಾಯಣ್ ಮಲ್ಹಾರ್ ಜೋಶಿ, ಭಾರತದ ಕಾರ್ಮಿಕ ಚಳವಳಿಯ ಪಿತಾಮಹ. ಅವರು ಭಾರತೀಯ ಕಾರ್ಮಿಕ ಹಕ್ಕುಗಳಿಗಾಗಿ ಹೋರಾಡಿದ ಪ್ರಮುಖ ನಾಯಕ.

**1991:** ಉಮಾಶಂಕರ್ ದೀಕ್ಷಿತ್, ಭಾರತೀಯ ರಾಜಕಾರಣಿ ಮತ್ತು ಮಾಜಿ ಗೃಹ ಸಚಿವ. ಅವರು ಕರ್ನಾಟಕ ಮತ್ತು ಪಶ್ಚಿಮ ಬಂಗಾಳದ ರಾಜ್ಯಪಾಲರಾಗಿದ್ದರು.

**2013:** ರಿತುಪರ್ಣೋ ಘೋಷ್, ಬಂಗಾಳಿ ಚಲನಚಿತ್ರ ನಿರ್ದೇಶಕ ಮತ್ತು ಲೇಖಕ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248